# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಫೆಬ್ರವರಿ 22, 2023

ಸಂಪುಟ : 49   ಸಂಚಿಕೆ : 281   ☎ 254736   91642 99999   RNI No: 27369/75   KA/SK/CTA-275/2021-2023. O/P @ B.V. Nagar P.O.   ಪುಟ : 6   ರೂ : 5.00   www.janathavani.com   janathavani@mac.com


# 17.91 ಕೋಟಿ ರೂ. ಉ. ಬಜೆಟ್

## ಪಾಲಿಕೆ ಆಯ-ವ್ಯಯ ಮಂಡಿಸಿದ ಸ್ಥಾಯಿ ಸಮಿತಿ ಅಧ್ಯಕ್ಷ ಶಾಂತಕುಮಾರ್



ದಾವಣಗೆರೆ, ಫೆ.21- ಮಹಾನಗರ ಪಾಲಿಕೆಯಿಂದ 2023-24ನೇ ಆರ್ಥಿಕ ವರ್ಷಕ್ಕೆ 17.91 ಕೋಟಿ ರೂ.ಗಳ ಉಳಿತಾಯ ಬಜೆಟ್ ಮಂಡಿಸಲಾಯಿತು.

ಮಂಗಳವಾರ ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ಮೇಯರ್ ಜಯಮ್ಮ ಆರ್. ಗೋಪಿನಾಯ್ಕ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಲೆಕ್ಕಪತ್ರ ಮತ್ತು ಸ್ಥಾಯಿ ಸಮಿತಿ ಅಧ್ಯಕ್ಷ ಸೋಗಿ ಶಾಂತಕುಮಾರ್ ಬಜೆಟ್ ಮಂಡಿಸಿದರು.

ಪಾಲಿಕೆಯ ಸ್ವಂತ ಆದಾಯ ಮೂಲಗಳಿಂದ 164.01 ಕೋಟಿ ರೂ. ಸಂಗ್ರಹ, ಸರ್ಕಾರದ ವಿವಿಧ ಯೋಜನೆ ಗಳಿಂದ 179.45 ಕೋಟಿ ರೂ. ಸೇರಿ ಒಟ್ಟು 490.63 ಕೋಟಿ ರೂ.ಗಳಲ್ಲಿ 539.98 ಕೋಟಿ ರೂ.ಗಳನ್ನು ಖರ್ಚು ಮಾಡುವ ಮೂಲಕ 17.91 ಕೋಟಿ ರೂ. ಉಳಿತಾಯ ಮಾಡುವ ನಿರೀಕ್ಷೆ ಹೊಂದಲಾಗಿದೆ.

ಆಡಳಿತ ಪಕ್ಷದ ಸದಸ್ಯರು ಇದೊಂದು ಉತ್ತಮ ಬಜೆಟ್ ಎಂದು ಬೆನ್ನು ತಟ್ಟಿಕೊಂಡರೆ, ವಿಪಕ್ಷ ನಾಯಕರು ಹಾಗೂ ಸದಸ್ಯರು ಜನರ ಕಿವಿ ಮೇಲೆ ಹೂ ಇಡುವ ಬಜೆಟ್ ಇದಾಗಿದೆ ಎಂದು ಟೀಕಿಸಿದರು.

**ಆಸ್ತಿ ತೆರಿಗೆ ಹೆಚ್ಚಳದ ಗುರಿ :** ಬಜೆಟ್ ನಲ್ಲಿ ಆಸ್ತಿ ತೆರಿಗೆ (2ನೇ ಪುಟಕ್ಕೆ)

### ಪಾರಂಪರಿಕ ತ್ಯಾಜ್ಯ ವಿಲೇವಾರಿಗೆ 22 ಕೋಟಿ

**ನಗರದ ಘನತ್ಯಾಜ್ಯ ವಿಲೇವಾರಿ ಜಮೀನಿ ನಲ್ಲಿ ಸುಮಾರು ವರ್ಷಗಳಿಂದ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯವನ್ನು ಬಯೋ ರೆಮಿಡಿಯೇಷನ್ ಮೂಲಕ ವಿಲೇಪಡಿಸಿ ಅಂದಾಜು 16 ಎಕರೆ ಜಾಗ ವನ್ನು ಮರು ಬಳಕೆಗೆ ಯೋಗ್ಯವಾಗಿಸುವ ಉದ್ದೇಶಕ್ಕಾಗಿ ಬಜೆಟ್ ನಲ್ಲಿ 22 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ.**

# ಮಾ.4ಕ್ಕೆ ಮೇಯರ್ ಚುನಾವಣೆ

ದಾವಣಗೆರೆ, ಫೆ.21- ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳಿಗೆ ಚುನಾವಣಾ ದಿನಾಂಕ ಘೋಷಣೆಯಾಗಿದ್ದು, ಬರುವ ಮಾರ್ಚ್ 4ರಂದು ಚುನಾವಣೆ ನಡೆಯಲಿದೆ.

ಮೇಯರ್ ಸ್ಥಾನ ಪರಿಶಿಷ್ಟ ಪಂಗಡಕ್ಕೆ ಹಾಗೂ ಉಪ ಮೇಯರ್ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿದೆ. ಬೆಂಗಳೂರು ಪ್ರಾದೇಶಿಕ ಅಮ್ಲಾನ್ ಆದಿತ್ಯ ಬಿಸ್ವಾಸ್ ಚುನಾವಣಾಧಿಕಾರಿಯಾಗಿದ್ದಾರೆ.

**56 ಮತದಾರರು :** ಪಾಲಿಕೆ ಮೇಯರ್ ಹಾಗೂ ಉಪಮೇಯರ್ ಚುನಾವಣೆಯಲ್ಲಿ 45 ವಾರ್ಡ್ ಗಳ ಸದಸ್ಯರು, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ್, ವಿಧಾನ ಪರಿಷತ್ ಸದಸ್ಯರುಗಳಾದ ಮೋಹನ್ ಕುಮಾರ (2ನೇ ಪುಟಕ್ಕೆ)

# ಏ.1ರಿಂದ ಮಹಿಳೆಯರು-ವಿದ್ಯಾರ್ಥಿನಿಯರಿಗೆ ಉಚಿತ ಬಸ್‌ಪಾಸ್

ಬೆಂಗಳೂರು, ಫೆ. 21 - ಏಪ್ರಿಲ್ 1ರಿಂದ ದುಡಿಯುವ ಹೆಣ್ಣು ಮಕ್ಕಳಿಗೆ ಹಾಗೂ ಶಾಲಾ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್ ವ್ಯವಸ್ಥೆ ಕಲ್ಪಿಸಲು ಎಲ್ಲ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಅವರು ಇಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವೋಲ್ವೋ ಮಲ್ಟಿ ಆಕ್ಸೆಲ್ ಬಿಎಸ್ 4 - 9600 ಸ್ಲೀಪರ್ ಬಸ್‌ಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು.

ಮಹಿಳೆಯರಿಗೆ ಗೌರವದ ಜೊತೆಗೆ ಆರ್ಥಿಕವಾಗಿ ಸ್ವಾವಲಂಬಿಯಾಗಲು ಈ ಯೋಜನೆ ರೂಪಿಸಲಾಗಿದೆ. ಮಿನಿ ಸ್ಕೂಲ್ ಬಸ್‌ಗಳನ್ನು ಪರಿಚಯಿಸಬೇಕು. ಇರುವ ಬಸ್‌ಗಳ ಸಂಚಾರ ಆರಂಭ ಮಾಡಬೇಕು. ಶಾಲೆ ಆರಂಭವಾಗುವ ಸಂದರ್ಭದಲ್ಲಿ ಪ್ರತಿ ತಾಲ್ಲೂಕಿನಲ್ಲಿ ಕನಿಷ್ಟ ಐದು ಬಸ್ ಸಂಚಾರ ಆರಂಭ ಮಾಡಬೇಕು.

ಅಗತ್ಯ ಬಿದ್ದರೆ ಇನ್ನಷ್ಟು ಅನುದಾನ ನೀಡಲಾಗುವುದು ಎಂದರು. (2ನೇ ಪುಟಕ್ಕೆ)


40 ವರ್ಷ ಅಥವಾ ಮೇಲ್ಪಟ್ಟ ಪುರುಷರು
ಮೂತ್ರದ ತೊಂದರೆಯಿಂದ ಬಳಲುತ್ತಿದ್ದೀರಾ?
ಹಾಗಾದರೆ ನಮ್ಮ ಉಚಿತ
ಯುರೋಫ್ಲೋಮೆಟ್ರಿ ಶಿಬಿರಕ್ಕೆ
ಭೇಟಿ ನೀಡಿ...
ನಡೆಸಿ ಕೊಡುವವರು:
ಡಾ॥ ಅಭಿಜಿತ್ ಎಸ್. ಎಂ
MBBS.MS.MCH urology
ದಿನಾಂಕ : 25.02.2023ರ ಶನಿವಾರ
ಸಮಯ : ಬೆಳಿಗ್ಗೆ 11 : 00 ರಿಂದ ಮಧ್ಯಾಹ್ನ 3 : 00 ಗಂಟೆ
ಸ್ಥಳ : ಆಶ್ರಯ ಆಸ್ಪತ್ರೆ
#1977/1/2, ಎಂ ಸಿ ಸಿ "ಎ" ಬ್ಲಾಕ್, ಶಾಮನೂರು ರಸ್ತೆ
ದಾವಣಗೆರೆ - 577004.
ಮಾಹಿತಿಗಾಗಿ ಸಂಪರ್ಕಿಸಿ : 08192 224679
ಆಶ್ರಯ : 91412 12120



Congratulations



Prof. Dr. K. Pushpalatha

She is proud alumn of JJMMC Davangere.
On Promotion as Professor and assuming the charge of Head of the Department (HOD)
Dept of Obstetrics and Gynaecology AIIMS Bhopal.
Subsequent to her post graduation degree , has an illustrious career with the experience of working in St. John's medical college, KMIO, AIIMS Bhuvaneshwar and AIIMS New Delhi.

Wishes From :
Spouse : Ravindra Pattar
Daughters : Sanjana, (MBBS)
Apoorva, (MBBS)



## ಸಾರ್ವಜನಿಕರ ಗಮನಕ್ಕೆ

ನಮ್ಮ ಕಕ್ಷಿದಾರರಾದ ಕೃಷ್ಣಚಾರಿ ಬಿನ್ ಮಾನಪ್ಪ ಬಡಿಗೇರ್, ಇವರಿಗೆ ರಾಜೇಶ್ ಜಿ. ವೆರ್ಣೇಕರ್ ಬಿನ್ ಗಂಗಾಧರ ನಾಗಪ್ಪ ವೆರ್ಣೇಕರ್ ಮತ್ತು ಮಂಜುನಾಥ ಗಂಗಾಧರ ವೆರ್ಣೇಕರ್ ಬಿನ್ ಗಂಗಾಧರ ನಾಗಪ್ಪ ವೆರ್ಣೇಕರ್, ವಾಸ: ಡೋರ್ ನಂ.249/2, ಮ್ಯಾಸಬೇಡರಕೇರಿ, ಒಕ್ಕಲಿಗರ ಪೇಟೆ, ದಾವಣಗೆರೆ ಆದ ಇವರುಗಳು ನನ್ನ ಕಕ್ಷಿದಾರರಿಗೆ ದಿನಾಂಕ:19-03-2021 ರಂದು ನೋಂದಾಯಿತ ಕ್ರಯದ ಕರಾರು ಪತ್ರದ ಮೂಲಕ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತನ್ನು ಮಾರಾಟ ಮಾಡಲೆಂದು ಬರೆದುಕೊಟ್ಟಿರುತ್ತಾರೆ. ತದನಂತರದಲ್ಲಿ ನನ್ನ ಕಕ್ಷಿದಾರರು ಮೇಲ್ಕಾಣಿಸಿದ ರಾಜೇಶ್ ಜಿ. ವೆರ್ಣೇಕರ್ ಮತ್ತು ಮಂಜುನಾಥ ಗಂಗಾಧರ ವೆರ್ಣೇಕರ್ ಇವರನ್ನು ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತನ್ನು ನೋಂದಾಯಿಸಿಕೊಡಲೆಂದು ಕೇಳಿದರೂ ಸಹ ಸದರಿಯವರು ಷೆಡ್ಯೂಲ್ ಸ್ವತ್ತಿನ ಕ್ರಯಪತ್ರವನ್ನು ನನ್ನ ಕಕ್ಷಿದಾರರಿಗೆ ಬರೆದು ಕೊಡದಿರುವುದರಿಂದ, ನನ್ನ ಕಕ್ಷಿದಾರರು ಸದರಿಯವರ ಮೇಲೆ ಕ್ರಯದ ಕರಾರಿನ ಅನುಷ್ಠಾನಕ್ಕೆ ನಿರ್ದಿಷ್ಟ ಪರಿಹಾರ ನಿಯಮದಡಿಯಲ್ಲಿ ದಾವಣಗೆರೆಯ 1ನೇ ಹೆಚ್ಚುವರಿ ಸಿವಿಲ್ ಜಡ್ಜ್‌ರವರ ನ್ಯಾಯಾಲಯ (ಹಿರಿಯ ವಿಭಾಗ) ಇವರಲ್ಲಿ ಅಸಲು ದಾವೆ ನಂ.84/2023 ಎಂಬ ದಾವೆಯನ್ನು ಸಲ್ಲಿಸಿ ಸದರಿ ದಾವೆಯಲ್ಲಿ ಷೆಡ್ಯೂಲ್ ಸ್ವತ್ತನ್ನು ಯಾರಿಗೂ ಮಾರಾಟ ಮಾಡಬಾರದೆಂದು ಮಧ್ಯಂತರ ಅರ್ಜಿಯನುಸಾರ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ಮೇಲೆ ಮಾನ್ಯ ನ್ಯಾಯಾಲಯದವರು ತುರ್ತು ನೋಟಿಸನ್ನು ಸಹ ನೀಡಿರುತ್ತಾರೆ. ಈ ನಡುವೆ ಮೇಲೆ ತಿಳಿಸಿರುವ ರಾಜೇಶ್ ಜಿ, ವೆರ್ಣೇಕರ್ ಮತ್ತು ಮಂಜುನಾಥ ಜಿ. ವೆರ್ಣೇಕರ್ ಇವರುಗಳು ಷೆಡ್ಯೂಲ್ ಸ್ವತ್ತನ್ನು ಕೆಲವರಿಗೆ ಮಾರಾಟ ಮಾಡುವ ಹಾಗೂ ಅಡಮಾನ ಮಾಡುವ ಉದ್ದೇಶದಿಂದ ಪರಭಾರೆ ಮಾಡುತ್ತಿದ್ದಾರೆಂದು ತಿಳಿದುಬಂದಿರುತ್ತದೆ. ಆದ್ದರಿಂದ ಈ ಮೂಲಕ ತಿಳಿಸುವುದೇನೆಂದರೆ, ಈಗಾಗಲೇ ಷೆಡ್ಯೂಲ್ ಸ್ವತ್ತನ್ನು ಸದರಿಯವರು ನನ್ನ ಕಕ್ಷಿದಾರರಿಗೆ ನೋಂದಾಯಿತ ಕ್ರಯದ ಕರಾರು ಪತ್ರದ ಮೂಲಕ ಬರೆದುಕೊಟ್ಟಿದ್ದು, ಅದರ ಬಗ್ಗೆ ನನ್ನ ಕಕ್ಷಿದಾರರು, ದಾವೆಯನ್ನು ಸಲ್ಲಿಸಿದ್ದು, ಈ ಬಗ್ಗೆ ಯಾರಾದರೂ ಮೇಲೆ ತಿಳಿಸಿರುವವರಿಂದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರವನ್ನು ಮಾಡಿದಲ್ಲಿ ನನ್ನ ಕಕ್ಷಿದಾರರ ಹಕ್ಕಿಗೆ ಬಾಧಿಸುವುದಿಲ್ಲ ಹಾಗೂ ಯಾರಾದರೂ ವ್ಯವಹಾರ ಮಾಡಿದಲ್ಲಿ ನನ್ನ ಕಕ್ಷಿದಾರರು ಜವಾಬ್ದಾರರಲ್ಲವೆಂದು ಈ ಮೂಲಕ ಹೊರಡಿಸಲಾದ ಸಾರ್ವಜನಿಕ ನೋಟಿಸ್.

ಷೆಡ್ಯೂಲ್

ದಾವಣಗೆರೆ, ಸಿಟಿ, ವಿನೋಬನಗರ, 4ನೇ ಮೇನ್, 4ನೇ ಕ್ರಾಸ್‌ನಲ್ಲಿರುವ ಆರ್.ಸಿ.ಸಿ. ರೂಫಿಂಗ್ ವುಳ್ಳ ವಸತಿ ಕಟ್ಟಡದ ಡೋರ್ ನಂ.1852/3ಎ ಅಳತೆ ಪೂರ್ವ-ಪಶ್ಚಿಮ 25 ಅಡಿ, ಉತ್ತರ -ದಕ್ಷಿಣ 100 ಅಡಿವುಳ್ಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ : ದತ್ತರಾಮ ಆರ್.ರಾಯ್ಕರ್ ಮತ್ತು ವನಮಾಲಾ ಇವರ ಸ್ವತ್ತು. ಪಶ್ಚಿಮಕ್ಕೆ: ಎಂ.ಪ್ರಭಾಕರ್ ಇವರ ಸ್ವತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ:- ಇತರೆಯವರ ಸ್ವತ್ತು.

ಬಿ.ಎಂ. ಕೃಷ್ಣಾಚಾರಿ
ಕಕ್ಷಿದಾರರ ಸಹಿ

ಸ್ಥಳ : ದಾವಣಗೆರೆ.
ದಿನಾಂಕ : 21.02.2023

D.N. BASAVARAJ
B.Sc.,LL.B
ADVOCATE KAR: 754/97
Off: Srishaila Mutt Complex.
P.B. Road, DAVANGERE.
M : 9448319066, 9964378193



॥ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಪ್ರಸನ್ನ ॥

## ವಿವಾಹ ಮಹೋತ್ಸವ ಆಮಂತ್ರಣ

ಶ್ರೀಮತಿ ಸೋನಿಯ, ಶ್ರೀ ಎಂ. ಬಸವರಾಜ್ ನಾಯ್ಕ
ಅಧ್ಯಕ್ಷರು - ಕೇಂದ್ರ ಪರಿಹಾರ ಸಮಿತಿ, ಕರ್ನಾಟಕ ಸರ್ಕಾರ, ಮಾಜಿ ಶಾಸಕರು - ಮಾಯಕೊಂಡ
ಆಲೂರಹಟ್ಟಿ ಗ್ರಾಮ, ದಾವಣಗೆರೆ ತಾಲ್ಲೂಕು - ಜಿಲ್ಲೆ. ಇವರು ಮಾಡುವ ವಿಜ್ಞಾಪನೆಗಳು.

ಸ್ವಸ್ತಿಶ್ರೀ ಮನ್ನೃಪ ಶಾಲಿವಾಹನ ಶಕೆ 1944 ಕ್ಕೆ ಸಲ್ಲುವ ಶುಭಕೃತ ನಾಮ ಸಂವತ್ಸರ ಉತ್ತರಾಯಣ ಶಿಶಿರಋತು ಫಾಲ್ಗುಣ ಮಾಸ ಶುಕ್ಲಪಕ್ಷ ಚತುರ್ಥಿ ದಿನಾಂಕ 23-02-2023 ನೇ ಗುರುವಾರ ಈ ಶುಭದಿನ ಬೆಳಗ್ಗೆ 8.15 ರಿಂದ 9.30 ರೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ

ನಮ್ಮ ದ್ವಿತೀಯ ಪುತ್ರಿ
ಚಿ॥ ಕುಂ॥ ಸೌ॥ ಕೋಮಲ್ ಬಿ. M.S.W.
Founder of Anustana Foundation, President of Sri Ranganatha Swamy Vidhya Samsthe

ಚಿ॥ ರಾ॥ ಪ್ರವೀಣ್ (PKM Nayak) B.Tech-NIT Surathkal
JP Morgan Chase & Co. (American Bank)
(ಶ್ರೀಮತಿ ಮಲೋತ್ ವಿಮಲಾ ಮತ್ತು ಶ್ರೀ ಮಲೋತ್ ಬಿಕ್ಸಾಂ (ಜಮೀನ್ದಾರರು) ಬೋಜ್ಯ ತಾಂಡ, ವೇರಂಗಲ್ ಜಿಲ್ಲೆ, ತೆಲಂಗಾಣ, ಇವರ ತೃತೀಯ ಪುತ್ರ)

ಇವರ ವಿವಾಹ ಮಹೋತ್ಸವವನ್ನು ಸುಧಾ ವೀರೇಂದ್ರ ಪಾಟೀಲ್ ಸಮುದಾಯ ಭವನ ಚನ್ನಗಿರಿ ರಸ್ತೆ, ಶಿರಮಗೊಂಡನಹಳ್ಳಿ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ, ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ,



ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಸೋನಿಯ, ಶ್ರೀ ಎಂ. ಬಸವರಾಜ್ ನಾಯ್ಕ
ಅಧ್ಯಕ್ಷರು - ಕೇಂದ್ರ ಪರಿಹಾರ ಸಮಿತಿ, ಕರ್ನಾಟಕ ಸರ್ಕಾರ,
ಮಾಜಿ ಶಾಸಕರು - ಮಾಯಕೊಂಡ
ಆಲೂರಹಟ್ಟಿ ಗ್ರಾಮ, ದಾವಣಗೆರೆ ತಾಲ್ಲೂಕು - ಜಿಲ್ಲೆ.

ಆರತಕ್ಷತೆ :
22-02-2023ನೇ ಬುಧವಾರ
ಸಂಜೆ 7-00 ರಿಂದ

ವಿವಾಹ ಮುಹೂರ್ತ :
23-02-2023ನೇ ಗುರುವಾರ
ಬೆಳಿಗ್ಗೆ 8-15 ರಿಂದ 9-30 ರವರೆಗೆ

ತಮ್ಮ ಸುಖಾಗಮನ ಬಯಸುವವರು :
ನಂದೀಶ್ ಬಿ. ಮತ್ತು ಕೋಯಲ್ ಚಂದ್ರು ಹಾಗೂ ಬಂಧು-ಮಿತ್ರರು

ವಿ.ಸೂ. : ಆಹ್ವಾನ ಪತ್ರಿಕೆ ಎಲ್ಲರಿಗೂ ಕಳುಹಿಸಲಾಗಿದ್ದು, ಸಮಯದ ಅಭಾವ ಮತ್ತು ಇತರೆ ಕಾರಣಗಳಿಂದ ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ವಿನಂತಿ.



॥ ಶ್ರೀ ಉತ್ಸವಾಂಬ ದೇವಿ ಪ್ರಸನ್ನ ॥

## ಶುಭ ವಿವಾಹ ಮಹೋತ್ಸವದ ಆಹ್ವಾನ

॥ ಸರ್ವಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಕೇ॥ ॥ಶರಣ್ಯೇ ತ್ರಯಂಬಕೇ ದೇವಿ ನಾರಾಯಣೀ ನಮೋಸ್ತುತೇ॥
ಶ್ರೀಮತಿ ಕೆಂಚಮ್ಮ ಶ್ರೀ ಟಿ. ನಾಗಪ್ಪ, ದೊಡ್ಡಬಾತಿ ಇವರ ಮಗನಾದ
ಶ್ರೀಮತಿ ನೇತ್ರಾವತಿ ಶ್ರೀ ಟಿ.ಎನ್. ರಾಜಶೇಖರ್ (ಬಾತಿ ರಾಜು)
ಇವರುಗಳು ಮಾಡುವ ವಿಜ್ಞಾಪನೆಗಳು.



ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀ ಮನ್ನೃಪ ಶಾಲಿವಾಹನ ಶಕೆ 1944ನೇ ಶುಭಕೃತ ನಾಮ ಸಂವತ್ಸರ ಫಾಲ್ಗುಣ ಮಾಸ ಶುಕ್ಲ ಪಕ್ಷ ಚತುರ್ಥಿ ತಿಥಿ ದಿನಾಂಕ : 23.02.2023 ನೇ ಗುರುವಾರ ಬೆಳಿಗ್ಗೆ 08.08. ರಿಂದ 08.38ರ ವರೆಗೆ ಸಲ್ಲುವ ಮೀನ ಲಗ್ನದ ಶುಭ ಮುಹೂರ್ತದಲ್ಲಿ

ನಮ್ಮ ಸುಪುತ್ರಿ
ಚಿ॥ ಕುಂ॥ ಸೌ॥ ಪಾರ್ವತಿ

ಚಿ॥ರಾ॥ ವಿದ್ಯಾಧರ ಪ್ರಸಾದ್ ಬಿ.ಜೆ. BE.Mech.,
ಶ್ರೀಮತಿ ಯಶೋಧಮ್ಮ ಶ್ರೀ ಜಯದೇವಪ್ಪ, ಬಾವಿಕಟ್ಟೆ, ಹರಿಹರ. ಇವರ ಪುತ್ರ


ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ, ತಾವುಗಳು ಸಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ, ನೂತನ ವಧು-ವರರಿಗೆ ಆಶೀರ್ವದಿಸಿ, ನಮ್ಮ ಮನಸ್ಸಂತೋಷಪಡಿಸಬೇಕಾಗಿ ಕೋರುವ.


ಆರತಕ್ಷತೆ :
22.02.2023ನೇ
ಬುಧವಾರ ಸಂಜೆ : 7.30 ರಿಂದ

ವಿವಾಹ ದಿನಾಂಕ : 23.02.2023ನೇ ಗುರುವಾರ
ಬೆಳಿಗ್ಗೆ : 08.08 ರಿಂದ 08.38ರ ವರೆಗೆ

ಲಗ್ನ : "ಮೀನ"

ವಿವಾಹ ಸ್ಥಳ : ತ್ರಿಶೂಲ್ ಕಲಾಭವನ
ತ್ರಿಶೂಲ್ ಟಾಕೀಸ್ ರಸ್ತೆ, ದಾವಣಗೆರೆ.





ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ನೇತ್ರಾವತಿ ಶ್ರೀ ಟಿ.ಎನ್. ರಾಜಶೇಖರ್
ಶ್ರೀಮತಿ ಕುಸುಮ ಶ್ರೀ ಟಿ.ಎನ್. ಚಂದ್ರಶೇಖರ್
ಶ್ರೀಮತಿ ರೇಣುಕ ಶ್ರೀ ಟಿ.ಎನ್. ಬಸವರಾಜ್
ಕು॥ ಅದಿತಿ, ಉಮೇಶ್ ಟಿ.ಎನ್., ಶ್ರೀಮತಿ ಆರತಿ ಶ್ರೀ ಅಶೋಕ ಟಿ.ಎನ್.

ತಮ್ಮ ಸುಖಾಗಮನ ಬಯಸುವವರು :
ಶ್ರೀಮತಿ ಇಂದಿರಾ ಶ್ರೀ ಎಸ್.ವಿ. ರಾಮಚಂದ್ರ
ಶಾಸಕರು, ಜಗಳೂರು ವಿಧಾನಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು. ಚಿ॥ ಅಜೇಂದ್ರ ಸಿಂಹ
ಶ್ರೀಮತಿ ಈರಮ್ಮ ಬಿ.ಎಂ.ಸಿದ್ದಲಿಂಗಪ್ಪ, ಶಿಕ್ಷಕರು, ಮಕ್ಕಳು ಮತ್ತು ಮೊಮ್ಮಕ್ಕಳು
ಶ್ರೀಮತಿ ಸುಶೀಲ ಶ್ರೀ ಬಸವರಾಜ್, ಬಾವಿಕಟ್ಟೆ., ಶ್ರೀಮತಿ ಜಯದೇವಿ ಶ್ರೀ ದೇವೇಂದ್ರಪ್ಪ ಬಿ.ಎಸ್. ಚಿ॥ ಅರ್ಜುನ್
ಶ್ರೀಮತಿ ಮಂಜುಳಾ ಶ್ರೀ ಜಯರಾಂ ಎಂ.ಎಸ್. ಚಿ॥ ಶ್ರೀರಾಂ, ಕು॥ ವಜ್ರ
ಶ್ರೀಮತಿ ಉಷಾ ಶ್ರೀ ಮಂಜುನಾಥ್ ಟಿ.ಆರ್. ಚಿ॥ ಪೂರ್ವ, ಕು॥ ಯಶಸ್ವಿನಿ, ತ್ಯಾವಣಗಿ,
ಶ್ರೀಮತಿ ನಂದಿನಿ ಶ್ರೀ ಗುರುಪ್ರಸಾದ್ ಟಿ.ಸಿ., ಶ್ರೀಮತಿ ಅಮೃತ ಶ್ರೀ ಮೇಘರಾಜ್ ಎಂ.ಬಿ., ಚಿ॥ ಅಶ್ವಿಕ್
ಶ್ರೀಮತಿ ಪ್ರೀತಿ ಶ್ರೀ ಅನಿಲ್ ಬಾವಿಕಟ್ಟೆ, ಕು॥ ಹರ್ಷಿತ, ಚಿ॥ ಹರ್ಷಿತ್
ಶ್ರೀಮತಿ ರಜನಿ ಶ್ರೀ ಡಾ॥ ಚಂದ್ರಶೇಖರ್ ಟಿ. ಚಿ॥ ಚಿರಂತನ್, ಚಿ॥ ಅನಿಕೇತನ್, ಶ್ರೀಮತಿ ಅಶ್ವಿನಿ ಶ್ರೀ ಕೃಷ್ಣ ಬನ್ನಿಕಟ್ಟೆ, ಚಿ॥ ಅನಿಶ್, ಚಿ॥ ಆಕರ್ಷ್
ಚಿ॥ ಗಣೇಶ್ ಟಿ.ಸಿ. ಚಿ॥ ಚಿರಂಜೀವಿ ಟಿ.ಬಿ. ಚಿ॥ ಯಶ್ ಟಿ.ಬಿ. ಹಾಗೂ ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# 17.91 ಕೋಟಿ ರೂ. ಉಳಿತಾಯ ಬಜೆಟ್

**(1ನೇ ಪುಟದಿಂದ)** ಸಂಗ್ರಹ ಹೆಚ್ಚಿಸುವ ಗುರಿ ಹೊಂದಲಾಗಿದ್ದು, ಶೇ.100ರಷ್ಟು ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತಂದು 30 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದೆ.

ಕೆ.ಆರ್. ಮಾರುಕಟ್ಟೆ, ಖಾಸಗಿ ಬಸ್ ನಿಲ್ದಾಣ ಮುಂತಾದ ಕಡೆಯ ಹೊಸ ವಾಣಿಜ್ಯ ಮಳಿಗೆಗಳೂ ಸೇರಿದಂತೆ ಈಗಾಗಲೇ ಇರುವ ವಾಣಿಜ್ಯ ಮಳಿಗೆ ಹಾಗೂ ಸಮುಚ್ಛಯಗಳಿಂದ ಒಟ್ಟಾರೆ 1.15 ಕೋಟಿ ರೂ. ಆದಾಯ ಸಂಗ್ರಹದ ಗುರಿ ಹೊಂದಲಾಗಿದೆ. ನೀರು ಸರಬರಾಜು ಶುಲ್ಕದಿಂದ 5 ಕೋಟಿ, ನೀರು ಸರಬರಾಜು ಸಂಪರ್ಕ ಶುಲ್ಕದಿಂದ 10 ಲಕ್ಷ, ಒಳಚರಂಡಿ ಸಂಪರ್ಕ ಬಳಕೆದಾರರ ಶುಲ್ಕ 1.65 ಕೋಟಿ ರೂ. ನಿರೀಕ್ಷಿಸಲಾಗಿದೆ.

ಸಂತೆ ಸುಂಕ 60 ಲಕ್ಷ, ಘನತ್ಯಾಜ್ಯ ನಿರ್ವಹಣೆ ಬಳಕೆದಾರರ ಶುಲ್ಕ 5 ಕೋಟಿ ರೂ., ಕಟ್ಟಡ ಪರವಾನಗಿ ಶುಲ್ಕ 2.10 ಕೋಟಿ ರೂ., ಉದ್ದಿಮೆ ಪರವಾನಗಿ ಶುಲ್ಕ 85 ಲಕ್ಷ, ರಸ್ತೆ ಕಡಿತ ಶುಲ್ಕ 1.50 ಕೋಟಿ ರೂ., ಆಸ್ತಿಗಳ ವರ್ಗಾವಣೆ ಮೇಲಿನ ಹೆಚ್ಚುವರಿ ಅಧಿಭಾರ ಶುಲ್ಕ 60 ಲಕ್ಷ ಹಾಗೂ ಅಭಿ ವೃದ್ಧಿ ಶುಲ್ಕ 45 ಲಕ್ಷ ಆದಾಯ ಸಂಗ್ರಹಣೆ ಗುರಿ ಹೊಂದಲಾಗಿದ್ದು, ಇವುಗಳು ಪಾಲಿ ಕೆಯ ಸ್ವಂತ ಆದಾಯ ಮೂಲಗಳಾಗಿವೆ.

**ಯಾವುದಕ್ಕೆ ಎಷ್ಟು ಖರ್ಚು :** ಮಹಾನಗರ ಪಾಲಿಕೆ ನೌಕರರು, ಸಿಬ್ಬಂದಿಗಳ ವೇತನಕ್ಕೆ 44.85 ಕೋಟಿ ರೂ. ಅಂದಾಜಿಸಲಾಗಿದೆ. ಮೂಲ ಸೌಕರ್ಯ, ಆಸ್ತಿಗಳ ನಿರ್ವಹಣೆ ಹಾಗೂ ದುರಸ್ತಿಗೆ 4.45 ಕೋಟಿ ರೂ., ಹೊರಗುತ್ತಿಗೆ ವೆಚ್ಚಗಳಿಗೆ 15.47 ಕೋಟಿ ರೂ., ಉಗ್ರಾಣ ಸಾಮಗ್ರಿಗಳ ಖರೀದಿಗೆ 1.55 ಕೋಟಿ ರೂ., ಇಂಧನ ಹಾಗೂ ವಿದ್ಯುತ್ ವೆಚ್ಚಗಳಿಗಾಗಿ 43.55 ಕೋಟಿ ರೂ., ಆಡಳಿತ ನಿರ್ವಹಣೆ, ಕೌನ್ಸಲ್ ವೆಚ್ಚವಾಗಿ 3.13 ಕೋಟಿ ರೂ. ವೆಚ್ಚ ನಿಗದಿಪಡಿಸಲಾಗಿದೆ.

ವಾಚನಾಲಯ ಹಾಗೂ ಡಿಜಿಟಲ್ ಗ್ರಂಥಾಲಯ ನಿರ್ಮಾಣಕ್ಕೆ 50 ಲಕ್ಷ ರೂ.ಗಳನ್ನು ಬಜೆಟ್‌ನಲ್ಲಿ ಕಾಯ್ದಿರಿಸಲಾಗಿದೆ. ಅವೈಜ್ಞಾನಿಕ ರಸ್ತೆ ಉಬ್ಬು ತೆರವಿಗೆ ಹಾಗೂ ರಸ್ತೆ ಗುಂಡಿ ಮುಚ್ಚಲು 75 ಲಕ್ಷ ರೂ., ಶಿಥಿಲಾವಸ್ಥೆಯಲ್ಲಿರುವ ಹಾಗೂ ಹಳೆಯ ಗರಡಿ ಮನೆಗಳ ನವೀಕರಣಕ್ಕೆ 50 ಲಕ್ಷ ರೂ., ಪಾಲಿಕೆ ಮುಂಭಾಗ ಸ್ಕೈವಾಕ್ ನಿರ್ಮಾಣಕ್ಕೆ 80 ಲಕ್ಷ ರೂ., ಪುತ್ಥಳಿಗಳಿಗೆ ಸುಣ್ಣ ಬಣ್ಣ ಬಳಿಯಲು 10 ಲಕ್ಷ ರೂ., ಪೌರಕಾರ್ಮಿಕರ ಸ್ವಚ್ಛತಾ ಪರಿಕರಗಳಿಗೆ 20 ಲಕ್ಷ ರೂ. ಮೀಸಲಿಡಲಾಗಿದೆ.

ಸ್ಮಶಾನಗಳ ಅಭಿವೃದ್ಧಿಗೆ 1 ಕೋಟಿ ರೂ., ಬೀದಿ ಬದಿ ವ್ಯಾಪಾರಿಗಳಿಗೆ ವೆಂಡಿಂಗ್ ಝೋನ್ ನಿರ್ಮಾಣಕ್ಕೆ 20 ಲಕ್ಷ ರೂ., ಉದ್ಯಾನವನಗಳ ನಿರ್ವಹಣೆಗೆ 10 ಲಕ್ಷ ರೂ., ತಾರಸಿ ಉದ್ಯಾನವನಗಳಿಗಾಗಿ 5 ಲಕ್ಷ ರೂ., ಮೇಯರ್ ಕಪ್ ಕ್ರೀಡೆಗೆ 5 ಹಾಗೂ ಪೌರ ಸನ್ಮಾನ ಕಾರ್ಯಕ್ರಮಕ್ಕೆ 5 ಲಕ್ಷ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ 5 ಲಕ್ಷ, ಕ್ರೀಡಾ ಚಟುವಟಿಕೆಗೆ 15 ಲಕ್ಷ ರೂ., ವಾರ್ಡ್ ನಂ.33ರಲ್ಲಿ ಒಳಾಂಗಣ ಕ್ರೀಡಾಂಗಣಕ್ಕೆ 55 ಲಕ್ಷ ರೂ., ಸದಸ್ಯರ ಅಧ್ಯಯನ ಪ್ರವಾಸಕ್ಕೆ 40 ಲಕ್ಷ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ ಅಧ್ಯಕ್ಷತೆಯಲ್ಲಿ ನಡೆದ ಆಯವ್ಯಯ ಸಭೆಯಲ್ಲಿ ಉಪ ಮೇಯರ್ ಗಾಯತ್ರಿಬಾಯಿ, ಸ್ಥಾಯಿ ಸಮಿತಿ ಸದಸ್ಯರುಗಳಾದ ಸೋಗಿ ಶಾಂತಕುಮಾರ್, ಉದಯಕುಮಾರ್, ರಾಕೇಶ್ ಜಾಧವ್, ಎಸ್.ಮಂಜುನಾಥ್, ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್, ಆಯುಕ್ತರಾದ ರೇಣುಕಾ, ಪರಿಷತ್ ಕಾರ್ಯದರ್ಶಿ ಕೆ.ಜಯಣ್ಣ ಇತರರು ಈ ಸಂದರ್ಭದಲ್ಲಿದ್ದರು.

## ಪೌರ ಕಾರ್ಮಿಕರ ಹಿತಕಾಯಲು ಆದ್ಯತೆ

**ಪೌರ ಕಾರ್ಮಿಕರ ಆರೋಗ್ಯದ ದೃಷ್ಟಿಯಿಂದ ಹಾಜರಾತಿ ಸ್ಥಳದಲ್ಲಿ ಸುಸಜ್ಜಿತ ವಿಶ್ರಾಂತಿ ಗೃಹ ನಿರ್ಮಿಸಲು 50 ಲಕ್ಷ ರೂ. ಕಾಯ್ದಿರಿಸಲಾಗಿದೆ. ಪೌರ ಕಾರ್ಮಿಕರು ಕರ್ತವ್ಯಕ್ಕೆ ತೆರಳಲು ಅನುಕೂಲವಾಗಲು ರಾಜ್ಯ ರಸ್ತೆ ಸಾರಿಗೆ ನಿಗಮದ ಸಹಯೋಗ ದಲ್ಲಿ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಲು ಉದ್ದೇಶಿಸಲಾಗಿದೆ. ಘನತ್ಯಾಜ್ಯ ನಿರ್ವಹಣೆಗಾಗಿ ಜೆಟ್ಟಿಂಗ್ ಮತ್ತು ಸಕ್ಕಿಂಗ್ ಮಷಿನ್‌ಗಳ ಖರೀದಿಗೆ 3.25 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ.**

## ಕಾಂಗ್ರೆಸ್ ಸದಸ್ಯರ ಕಿವಿ ಮೇಲೆ 'ಹೂ'



ದಾವಣಗೆರೆ, ಫೆ. 21 -ಪಾಲಿಕೆ ಬಜೆಟ್ ಮಂಡನೆ ಆರಂಭವಾಗು ತ್ತಲೇ ಕಾಂಗ್ರೆಸ್ ಸದಸ್ಯರು ಕಿವಿ ಮೇಲೆ ದಾಸ ವಾಳದ ಹೂಗಳನ್ನು ಇಟ್ಟುಕೊಂಡರು.

ಎ. ನಾಗರಾಜ್ 'ಇದು ಹೊಸತನವಿಲ್ಲದ ಬಜೆಟ್. ಕಳೆದ ವರ್ಷದ ಬಜೆಟ್‌ಗೂ ಇದಕ್ಕೂ ವ್ಯತ್ಯಾಸವಿಲ್ಲ. ಕಳೆದ ಬಜೆಟ್‌ನಲ್ಲಿನ ಘೋಷಣೆ ಗಳು ಶೇ.10ರಷ್ಟೂ ಈಡೇರಿಲ್ಲ. ಜನತೆಯ ಕಿವಿಗೆ ಹೂ ಇಡುವ ಕೆಲಸ ಮಾಡಿದ್ದೀರಿ. ಅದಕ್ಕಾಗಿಯೇ ನಾವು ಕಿವಿ ಮೇಲೆ ಹೂ ಇಟ್ಟುಕೊಂಡು ವಿರೋಧಿಸುತ್ತಿದ್ದೇವೆ' ಎಂದು ಹೇಳಿದರು.

ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್, ಇದು 'ಖಾಲಿ ಕೊಡದ ಬಜೆಟ್'. ಇದರಿಂದ ಏನನ್ನೂ ನಿರೀಕ್ಷೆ ಮಾಡಲಾಗದು ಎಂದರು.

ಬಿಜೆಪಿಯ ಸೋಗಿ ಶಾಂತಕುಮಾರ್, ಕೆ.ಪ್ರಸನ್ನಕುಮಾರ್ ಅವರು ಹೂ ಇಟ್ಟುಕೊಂಡ ಸದಸ್ಯರನ್ನು ಟೀಕಿಸುತ್ತಾ, ಮುಂದಿನ ದಿನಗಳಲ್ಲಿ ಮತದಾರರು ನಿಮಗೆ ಹೂ ಇಡುತ್ತಾರೆಂದು ಅರಿತು, ಮೊದಲೇ ಹೂ ಇಟ್ಟುಕೊಂಡಿದ್ದೀರಿ ಎಂದು ಛೇಡಿಸಿದರೆ, ಮೊದಲೇ ಹೇಳಿದ್ದರೆ ನಾನು ಒಳ್ಳೆಯ ಕಮಲದ ಹೂಗಳನ್ನು ತರಿಸುತ್ತಿದ್ದೆ ಎಂದು ಬಿ.ಜಿ. ಅಜಯ್ ಕುಮಾರ್ ಕಾಲೆಳೆದರು.

ತೆರಿಗೆ ಹೆಚ್ಚಳದಿಂದ ಜನತೆಗೆ ಹೊರೆ ಮಾಡಬೇಡಿ. ಸಂತೆ ಶುಲ್ಕದಿಂದ ಆದಾಯ ನಿರೀಕ್ಷೆ ಬೇಡ ಎಂದು ನಾಗರಾಜ್ ಸಲಹೆ ನೀಡಿದರು. ಆದಾಯ ಕಡಿಮೆ ತೋರಿಸಿ, ಖರ್ಚು ಹೆಚ್ಚು ತೋರಿಸಿದರೆ ಹೇಗೆ ಹೊಂದಾಣಿಕೆ ಮಾಡುತ್ತೀರಿ? ಹಣಕಾಸು ಸಮಿತಿಯ ಒಪ್ಪಿಗೆ ಬೇಕಲ್ಲವೇ? ಎಂದು ಪ್ರಶ್ನಿಸುತ್ತಾ, ಅಗತ್ಯವಿರುವ ನೀರು ಹಾಗೂ ಯುಜಿಡಿ ಕೆಲಸಗಳಿಗೆ ಮಾತ್ರ ಇರುವ ಅನುದಾನ ಬಳಸಿ, ಉಳಿದವುಗಳನ್ನು ಪೆಂಡಿಂಗ್ ಇಟ್ಟು ಆದ್ಯತೆ ಮೇಲೆ ಕಾಮಗಾರಿ ಕೈಗೊಳ್ಳುವಂತೆ ಸಲಹೆ ನೀಡಿದರು.

ಹಿರಿಯ ಸದಸ್ಯ ಚಮನ್ ಸಾಬ್, ಯಾವುದೇ ಚರ್ಚೆಗಳನ್ನು ನಡೆಸದೆ, ಬೇಕಾ ಬಿಟ್ಟಿಯಾಗಿ ಮಾಡಿರುವ ಬಜೆಟ್ ಇದು ಎಂದು ಟೀಕಿಸಿದರು. ಅಧಿಕಾರಿಗಳು ಶಿಸ್ತಿನಿಂದ ಕೆಲಸ ಮಾಡಿದರೆ ಪಾಲಿಕೆ ಆದಾಯವನ್ನು 60 ಕೋಟಿ ರೂ.ಗಳಿಗೆ ಹೆಚ್ಚಿಸಬಹುದಾಗಿದೆ. ಕಂದಾಯದಲ್ಲಿ ವಂಚನೆ ನಡೆಯುತ್ತಿದೆ. ವಿವಿಧ ಕೇಬಲ್‌ಗಳ ಅಳವಡಿಕೆ ಮಾಡಲು ರಸ್ತೆಗಳನ್ನು ಅಗೆಯುವಲ್ಲಿ ಶುಲ್ಕ ವಿಧಿಸುವ ವಿಚಾರದಲ್ಲಿ ದೊಡ್ಡ ಮಾಫಿಯವೇ ನಡೆಯುತ್ತಿದೆ ಅದನ್ನು ತಡೆಯಬೇಕು ಎಂದು ಆಗ್ರಹಿಸಿದರು.

ಆರೋಗ್ಯ, ಕಂದಾಯ ಹಾಗೂ ಆಶ್ರಯ ಯೋಜನೆ ವಿಭಾಗಗಳಲ್ಲಿ ಪಾಲಿಕೆ ಸದಸ್ಯರ ಮರ್ಯಾದೆ ತೆಗೆಯುವ ಕೆಲಸಗಳಾಗುತ್ತಿವೆ. ಆಶ್ರಯ ಯೋಜನೆ ವಿಭಾಗದಲ್ಲಂತೂ ಉಚಿತವಾಗಿ ಜಾಗ ನೀಡಿದ ಉದಾಹರಣೆ ಇತಿಹಾಸದಲ್ಲಿಯೇ ಇಲ್ಲ. ಇವುಗಳ ಬಗ್ಗೆ ಗಮನ ಹರಿಸಿ ಸರಿಪಡಿಸುವಂತೆ ಬಿ.ಜಿ. ಅಜಯ್ ಹೇಳಿದರು. 27 ಸಾವಿರ ಅರ್ಜಿಗಳು ಬಂದಿದ್ದು, ಯಾರಿಗೆ ಹಕ್ಕುಪತ್ರ ವಿತರಿಸಲಾಗಿದೆ ಎಂದು ಪರಿಶೀಲಿಸುವಂತೆ ಅಜಯ್ ಹೇಳಿದರು.

ಆಶ್ರಯ ಯೋಜನೆಯಡಿ ಹಕ್ಕುಪತ್ರ ವಿತರಿಸುತ್ತಿರುವ ಕುರಿತು ಸದಸ್ಯರು ಪಕ್ಷಭೇದ ಮರೆತು ಅಧಿಕಾರಿಗಳ ವಿರುದ್ಧ ಆರೋಪ ಮಾಡಿದರು.

## 3 ವರ್ಷದ್ದು ಚರ್ಚೆಯಾಗಲಿ ಎಂದ ಕಾಂಗ್ರೆಸ್, 8 ವರ್ಷದ್ದು ಎಂದ ಬಿಜೆಪಿ



ಮೇಯರ್ ಅವರು ಎರಡನೇ ಬಾರಿ ಬಜೆಟ್ ಮಂಡಿಸುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸಿದ ಎ. ನಾಗರಾಜ್, ಹೊಸ ಮೇಯರ್ ಬಜೆಟ್ ಮಂಡಿಸಬೇಕೆಂಬ ಒತ್ತಾಯ ನಮ್ಮದಾಗಿತ್ತು. ಆದರೆ ಏಕೆ ತರಾತುರಿಯಲ್ಲಿ ಬಜೆಟ್ ಮಂಡಿಸುತ್ತಿದ್ದೀರೋ ಗೊತ್ತಿಲ್ಲ ಎಂದರು.

ಕಳೆದ ಮೂರು ವರ್ಷಗಳಲ್ಲಿ ಏನೇನು ಕಾರ್ಯಗತಗೊಳಿಸಿದ್ದೀರಿ ಮೊದಲು ತಿಳಿಸಿ, ನಂತರ ಬಜೆಟ್ ಮಂಡಿಸಿರಿ ಎಂದು ಪಟ್ಟು ಹಿಡಿದರು.

ಬಿಜೆಪಿ ಸದಸ್ಯ ಕೆ.ಪ್ರಸನ್ನ ಕುಮಾರ್ ಮಾತನಾಡಿ, ಮೂರು ವರ್ಷದ ಚರ್ಚೆಯ ಜೊತೆಗೆ ಕಾಂಗ್ರೆಸ್ ಅವಧಿಯ 5 ವರ್ಷ ಸೇರಿ ಎಂಟು ವರ್ಷಗಳಲ್ಲಿ ಏನೇನು ಮಾಡಲಾಗಿದೆ ಎಂಬ ಬಗ್ಗೆಯೂ ಚರ್ಚೆಯಾಗಲಿ ಎಂದು ಮರು ಪಟ್ಟು ಹಿಡಿದರು. ಇತಿಹಾಸ ತೆಗೆದು ನೋಡಿ ಕಾಂಗ್ರೆಸ್ ಅವಧಿಯ ಐದು ವರ್ಷ ಅಭಿವೃದ್ಧಿಯ ಪರ್ವವಾಗಿತ್ತು ಎಂದು ನಾಗರಾಜ್ ಹೇಳಿದಾಗ, 'ನಿಮಗೆ ಮತ ನೀಡಿ ಪಶ್ಚಾತ್ತಾಪ ಪಟ್ಟೇ ಜನತೆ ಮನೆಗೆ ಕಳುಹಿಸಿದ್ದು' ಎಂದು ಮಾಜಿ ಮೇಯರ್ ಎಸ್.ಟಿ. ವೀರೇಶ್ ಹಾಗೂ ಕೆ.ಎಂ. ವೀರೇಶ್ ಕಾಂಗ್ರೆಸ್ ಸದಸ್ಯರಿಗೆ ಕುಟುಕಿದರು.

ಗಡಿಗುಡಾಳ್ ಮಂಜುನಾಥ್ ಅವರ ಮನೆ ಮುಂದಿನ ರಸ್ತೆ ಟಾರ್ ರಸ್ತೆಯಾಗಿದ್ದೇ ಶಾಸಕ ಎಸ್.ಎ. ರವೀಂದ್ರನಾಥ್ ಅವರಿಂದ ಎಂದಾಗ, ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್ ಹಾಗೂ ಎ.ನಾಗರಾಜ್, ಟಾರ್ ರಸ್ತೆ ಮಾಡಿಸಿದ್ದು ಎಸ್.ಎಸ್. ಮಲ್ಲಿಕಾರ್ಜುನ್ ಅವರು. ರವೀಂದ್ರನಾಥ್ ಒಂದು ಪುಟ್ಟಿ ಮಣ್ಣನ್ನೂ ಹಾಕಿಲ್ಲ ಎಂದು ಖಾರವಾಗಿ ತಿರುಗೇಟು ನೀಡಿದರು.

11 ಗಂಟೆಗೆ ಬಜೆಟ್ ಸಭೆ ನಿಗದಿಯಾಗಿತ್ತು. ಪಾಲಿಕೆ ಆಯುಕ್ತರು, ಅಧಿಕಾರಿಗಳು ನಿಗದಿತ ಸಮಯಕ್ಕೆ ಆಗಮಿಸಿದ್ದರಾದರೂ, ಮೇಯರ್ ಹಾಗೂ ಸದಸ್ಯರ ಆಗಮನ ತಡವಾಯಿತು. 11.35ಕ್ಕೆ ಸಭೆ ಆರಂಭವಾದರೂ, ಆರಂಭದಲ್ಲಿಯೇ ಅರ್ಧ ಗಂಟೆ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರ ನಡುವೆ ಮಾತಿನ ಚಕಮಕಿಗಳು ನಡೆದವು. 12ರ ನಂತರ ಬಜೆಟ್ ಕೈಪಿಡಿಯನ್ನು ಮೇಯರ್ ಬಿಡುಗಡೆ ಮಾಡಿದರು.

## 4 ತಾಸಲ್ಲೇ ಬಿಲ್ಡಿಂಗ್ ಲೈಸನ್ಸ್ ಕೊಡಿಸಿದ್ದೇನೆ ಎಂದ ಅಜಯ್‌ಗೆ ಕೈ ನಾಯಕರ ತಿರುಗೇಟು

ನಾನು ಮೇಯರ್ ಆದ ಅವಧಿಯಲ್ಲಿ ಮನೆ ಬಾಗಿಲಿಗೆ ಮಹಾನಗರ ಪಾಲಿಕೆ ಆಂದೋಲನ ನಡೆಸಿ ಕೇವಲ ನಾಲ್ಕು ತಾಸು ಅವಧಿಯಲ್ಲಿ ಬಿಲ್ಡಿಂಗ್ ಲೈಸನ್ಸ್ ನೀಡಲಾಗಿತ್ತು. 24 ತಾಸಿನಲ್ಲಿ 7 ಕಟ್ಟಡ ಪರವಾನಗಿ ನೀಡಿ ದಾಖಲೆ ನಿರ್ಮಿಸಿದ್ದೇನೆ ಎಂದು ಬಿ.ಜಿ. ಅಜಯ್ ಕುಮಾರ್ ಹೇಳಿದಾಗ, ಕಾಂಗ್ರೆಸ್ ಸದಸ್ಯರಿಂದ ತೀವ್ರ ವಿರೋಧ ವ್ಯಕ್ತವಾಯಿತು.

ನೀವು ದಾಖಲೆ ನಿರ್ಮಿಸುವುದಕ್ಕಾಗಿಯೇ ಆ ಕೆಲಸ ಮಾಡಿದ್ದೀರಿ. ಆರು ತಿಂಗಳುಗಳ ಕಾಲ ಪರವಾನಗಿಗಾಗಿ ಅಲೆಯುತ್ತಿದ್ದೇವೆ. 4 ತಾಸಿನಲ್ಲಿ ಲೈಸನ್ಸ್ ಕೊಡಲು ಸಾಧ್ಯವೇ ಇಲ್ಲ ಎಂದು ಚಮನ್ ಸಾಬ್, ಅಬ್ದುಲ್ ಲತೀಫ್, ಗಡಿಗುಡಾಳ್ ಮಂಜುನಾಥ್, ಎ.ನಾಗರಾಜ್ ವಾಕ್ಸಮರ ಆರಂಭಿಸಿದರು.

ಮೊದಲೇ ದಾಖಲೆಗಳನ್ನು ತಯಾರಿಸಿಟ್ಟು ಕೊಂಡಿದ್ದರೆ 4 ತಾಸಿನ ಬದಲಾಗಿ ಅರ್ಧ ತಾಸಿಗೇ ಲೈಸನ್ಸ್ ನೀಡಬಹುದು ಎಂದ ಅಬ್ದುಲ್ ಲತೀಫ್ ಅಜಯ್ ಅವರಿಗೆ ತಿರುಗೇಟು ನೀಡಿದರು.

ಆಯುಕ್ತರಾದ ರೇಣುಕಾ ಮಾತನಾಡಿ, ಅರ್ಜಿ ಸಲ್ಲಿಸಿದ 15 ದಿನದೊಳಗಾಗಿ ದಾಖಲೆಗಳನ್ನು ಪರೀಕ್ಷಿಸಿ ಲೈಸನ್ಸ್ ನೀಡಬೇಕೆಂದು ಸರ್ಕಾರದ ನಿರ್ದೇಶನವಿದೆ. ಆದರೆ ಸಮರ್ಪಕ ದಾಖಲೆ ನೀಡದ ಕಾರಣ ಶೇ.50ರಷ್ಟು ಅರ್ಜಿಗಳು ತಿರಸ್ಕೃತಗೊಳ್ಳುತ್ತವೆ ಎಂದು ಹೇಳಿದರು. ಶೀಘ್ರವಾಗಿ ಪರವಾನಗಿ ನೀಡುವ ಉದ್ದೇಶದಿಂದ ವಿಶೇಷ ಸಭೆ ನಡೆಸಿ, ವಲಯವಾರು ಸಹಾಯಕ ಇಂಜಿನಿಯರ್ ನೇಮಿಸಲಾಗಿದೆ. ಅವರ ಮೇಲ್ವಿಚಾರಕರಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ನೇಮಿಸಲಾಗಿದೆ ಎಂದು ಹೇಳಿದರು.

ಕ್ರೀಡೆಗೆ ಹೆಚ್ಚು ಅನುದಾನ ಮೀಸಲಿಡುವಂತೆ ಚಮನ್ ಸಾಬ್ ಸಲಹೆ ನೀಡಿದಾಗ, ಶೇ.1ರಷ್ಟು ಮಾತ್ರ ಅನುದಾನ ಮೀಸಲಿಡಲು ಅವಕಾಶವಿದ್ದು, ಶೇ.2ರಷ್ಟು ಮೀಸಲಿಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಆಯುಕ್ತರಾದ ರೇಣುಕಾ ಹೇಳಿದರು. ಪಾರ್ಕ್ ಅಭಿವೃದ್ಧಿಯಲ್ಲಿ 3 ಮುಸ್ಲಿಂ ಖಬರ್ ಸ್ಥಾನಗಳನ್ನೂ ಸೇರಿಸಿಕೊಳ್ಳುವಂತೆ ಚಮನ್ ಸಾಬ್ ಸಲಹೆ ನೀಡಿದರು.

## ಮಾ. 4 ರಂದು ಪಾಲಿಕೆ ಮೇಯರ್ ಚುನಾವಣೆ

**(1ನೇ ಪುಟದಿಂದ)** ಕೊಂಡಜ್ಜಿ, ನಂಜುಂಡಿ ವಿಶ್ವಕರ್ಮ ಕೆ.ಪಿ., ನವೀನ್ ಕೊಟ್ಟಿಗೆ, ರವಿಕುಮಾರ್ ಎನ್., ಡಾ.ತೇಜಸ್ವಿನಿ ಗೌಡ, ಅಬ್ದುಲ್ ಜಬ್ಬಾರ್ ಕೆ., ಕೆ.ಹರೀಶ್ ಕುಮಾರ್, ನಾರಾಯಣ ಸ್ವಾಮಿ ವೈ.ಎ. ಸೇರಿದಂತೆ 56 ಮತದಾರರು ತಮ್ಮ ಮತದಾನದ ಹಕ್ಕು ಚಲಾಯಿಸಲಿದ್ದಾರೆ.

## ಭಾರತದಲ್ಲಿ ನಗದು ಮೀರಿಸಲಿರುವ ಡಿಜಿಟಲ್ ವಹಿವಾಟು : ಮೋದಿ

ನವದೆಹಲಿ, ಫೆ. 21 – ಶೀಘ್ರದಲ್ಲೇ ಭಾರತದಲ್ಲಿ ನಗದಿಗಿಂತ ಡಿಜಿಟಲ್ ಮೂಲಕ ನಡೆಯುವ ವಹಿವಾಟು ಹೆಚ್ಚಾಗಲಿದೆ. ಯು.ಪಿ.ಐ. ದೇಶದ ಅತಿ ಜನಪ್ರಿಯ ವಹಿವಾಟು ಮಾಧ್ಯಮವಾಗುತ್ತಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಭಾರತದ ಯುಪಿಐ ಹಾಗೂ ಸಿಂಗಪುರದ ಪೇನೌ ನಡುವೆ ಸಂಪರ್ಕ ಕಲ್ಪಿಸುವುದಕ್ಕೆ ಚಾಲನೆ ನೀಡಿ ಪ್ರಧಾನಿ ಮಾತನಾಡಿದರು.

2022ರಲ್ಲಿ 126 ಟ್ರಿಲಿಯನ್ ರೂಪಾಯಿಗಳ ವಹಿವಾಟು ಯುಪಿಐ ಮೂಲಕ ನಡೆದಿದೆ. ಯುಪಿಐ ವಹಿವಾಟುಗಳ ಸಂಖ್ಯೆ 74 ಶತಕೋಟಿ ಎಂದು ಮೋದಿ ಹೇಳಿದರು.

ಶೀಘ್ರದಲ್ಲೇ ಭಾರತದಲ್ಲಿ ಡಿಜಿಟಲ್ ಮೂಲಕ ನಡೆಯುವ ವಹಿವಾಟು, ನಗದು ವಹಿವಾಟನ್ನು ಮೀರಿಸಲಿದೆ ಎಂದು ಹಲವಾರು ಪರಿಣಿತರು ಅಂದಾಜಿಸಿದ್ದಾರೆ ಎಂದು ಮೋದಿ ಹೇಳಿದರು.

ಮೋದಿ ಹಾಗೂ ಸಿಂಗಪುರದ ಪ್ರಧಾನ ಮಂತ್ರಿ ಲೀ ಸೀನ್ ಲೂಂಗ್ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಯುಪಿಐ ಹಾಗೂ ಪೇನೌ ಜೋಡಣೆಗೆ ಚಾಲನೆ ನೀಡಿದರು. ಈ ರೀತಿಯ ಸೌಲಭ್ಯವನ್ನು ಸಿಂಗಪುರದ ಜೊತೆ ಮೊದಲು ಆರಂಭಿಸಲಾಗಿದೆ. ಇದು ಸಿಂಗಪುರದಲ್ಲಿರುವ ಭಾರತದ ಅನಿವಾಸಿಗಳಿಗೆ ನೆರವಾಗಲಿದೆ. ವಿಶೇಷವಾಗಿ ವಲಸೆ ಕಾರ್ಮಿಕರು ಹಾಗೂ ವಿದ್ಯಾರ್ಥಿಗಳಿಗೆ ನೆರವಾಗಲಿದೆ.

ಯುಪಿ.ಐ. ಕೇವಲ ಭಾರತಕ್ಕೆ ಸೀಮಿತವಾಗಿರುವುದಿಲ್ಲ. ಇದನ್ನು ಬೇರೆ ದೇಶಗಳಿಗೂ ವಿಸ್ತರಿಸಲಾಗುವುದು ಎಂದು ಪ್ರಧಾನಿ ಮೋದಿ ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

## ಶತ್ರು ಆಸ್ತಿ ಮಾರಾಟದಿಂದ 3,400 ಕೋಟಿ ರೂ.

ನವದೆಹಲಿ, ಫೆ. 21 – ಶತ್ರು ಆಸ್ತಿಗಳನ್ನು ಮಾರುವ ಮೂಲಕ ಕೇಂದ್ರ ಸರ್ಕಾರ 3,400 ಕೋಟಿ ರೂ.ಗಳನ್ನು ಪಡೆದುಕೊಂಡಿದೆ. ಇದರಲ್ಲಿ ಬಹುತೇಕವು ಷೇರುಗಳು ಹಾಗೂ ಬಂಗಾರದಂತಹ ಚರಾಸ್ತಿಗಳಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದೇಶ ವಿಭಜನೆ ಹಾಗೂ 1962 ಹಾಗೂ 1965ರ ಯುದ್ಧಗಳಿಗೆ ಮುಂಚೆ ಪಾಕಿಸ್ತಾನ ಹಾಗೂ ಚೀನಾದ ಪೌರತ್ವ ಪಡೆದುಕೊಂಡವರು ಬಿಟ್ಟು ಹೋದ ಆಸ್ತಿಗಳನ್ನು ಶತ್ರು ಆಸ್ತಿ ಎಂದು ಪರಿಗಣಿಸಲಾಗುತ್ತಿದೆ.

ಈ ಆಸ್ತಿಗಳನ್ನು ವಿಲೇವಾರಿ ಮಾಡುವ ಮೂಲಕ ಒಟ್ಟು 3,407.98 ಕೋಟಿ ರೂ.ಗಳು ದೊರೆತಿವೆ. 152 ಕಂಪನಿಗಳ ಷೇರುಗಳ ಮಾರಾಟದಿಂದ 2,708.9 ಕೋಟಿ ರೂ. ಹಾಗೂ 699.08 ಕೋಟಿ ರೂ.ಗಳ ಆದಾಯವಾಗಿ ದೊರೆತಿವೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. 1699.79 ಗ್ರಾಂ ಬಂಗಾರ ಹಾಗೂ 28.89 ಕೆ.ಜಿ. ಬೆಳ್ಳಿಯನ್ನು ಮಾರಲಾಗಿದೆ. ಆದರೆ, ಸರ್ಕಾರ ಇದುವರೆಗೂ ಸ್ಥಿರಾಸ್ತಿಗಳನ್ನು ನಗದೀಕರಿಸಿಲ್ಲ. 12,611 ಶತ್ರು ಆಸ್ತಿಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 12,485 ಪಾಕಿಸ್ತಾನ ಹಾಗೂ 126 ಚೀನಾ ನಾಗರಿಕರಿಗೆ ಸಂಬಂಧಿಸಿದ್ದು.

## ಉಚಿತ ಬಸ್‌ಪಾಸ್

**(1ನೇ ಪುಟದಿಂದ)** ಆರ್ಥಿಕ ಬೆಳವಣಿಗೆಯಲ್ಲಿ ಸಂಚಾರ ಪ್ರಮುಖ ಪಾತ್ರ ವಹಿಸುತ್ತದೆ. ಅದಕ್ಕೆ ಸರ್ಕಾರ ಆದ್ಯತೆ ನೀಡಿದೆ. ಈ ಬಾರಿಯ ಬಜೆಟ್‌ನಲ್ಲಿ ವಿದ್ಯಾರ್ಥಿನಿಯರಿಗೆ ಹಾಗೂ ದುಡಿಯುವ ಹೆಣ್ಣು ಮಕ್ಕಳಿಗೆ ಉಚಿತ ಪಾಸ್ ನೀಡುವುದಾಗಿ ಘೋಷಣೆ ಮಾಡಿದ್ದು, ಸರ್ಕಾರಿ ನೌಕರ ವರ್ಗ ಹಾಗೂ ಆಡಳಿತ ಮಂಡಳಿ ಜೊತೆಗಿರುತ್ತದೆ. ಜನರಿಗೆ ಉತ್ತಮ ಸೇವೆ ಒದಗಿಸೋಣ ಎಂದರು. ಸಿಬ್ಬಂದಿಯ ವೇತನ ಹೆಚ್ಚಳ ಮಾಡುವ ಪ್ರಸ್ತಾವನೆ ಸಲ್ಲಿಸಿದ್ದು, ಹಣಕಾಸಿನ ಇತಿಮಿತಿಯಲ್ಲಿ ನೌಕರರೊಂದಿಗೆ ಚರ್ಚೆ ಮಾಡಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.


## ಸ್ಫಟಿಕ ಶ್ರೀ ಕ್ಷೇತ್ರ ಲಿಂಗದಹಳ್ಳಿಯಲ್ಲಿ ರಾಜ್ಯ ಮಟ್ಟದ ಭಜನಾ ಸ್ಪರ್ಧೆ

ರಾಣೇಬೆನ್ನೂರು, ಫೆ.21- ತಾಲ್ಲೂಕಿನ ಸ್ಫಟಿಕ ಶ್ರೀ ಕ್ಷೇತ್ರ ಲಿಂಗದಹಳ್ಳಿ ಗ್ರಾಮದ ರಂಭಾಪುರಿ ಶಾಖಾ ಹಿರೇಮಠದ ಪರಿಸರದಲ್ಲಿ ಬರುವ ಮಾರ್ಚ್ 4 ಮತ್ತು 5 ರಂದು ಜಗದ್ಗುರು ರೇಣುಕರ ಜಯಂತಿ ಹಾಗೂ ರಥೋತ್ಸವದ ನಿಮಿತ್ತ ರಾಜ್ಯ ಮಟ್ಟದ ಭಜನಾ ಸ್ಪರ್ಧೆ ಆಯೋಜಿಸಲಾಗಿದೆ.

ಪುರುಷರು ಮತ್ತು ಮಹಿಳೆಯರ ಪ್ರತ್ಯೇಕ ಸ್ಪರ್ಧೆಗಳು ನಡೆಯಲಿದ್ದು, ವಿಜೇತರಿಗೆ ಕ್ರಮವಾಗಿ ಪ್ರತ್ಯೇಕ ನಗದು ಬಹುಮಾನ ದೊರೆಯಲಿದೆ. ಪ್ರಥಮ ಬಹುಮಾನ 20,000 ರೂ. ದ್ವಿತೀಯ ಬಹುಮಾನ 15,000 ರೂ. ಹಾಗೂ ತೃತೀಯ ಬಹುಮಾನ 10,000 ರೂ. ನಗದು ಮೊತ್ತದ ಜೊತೆಗೆ ಪಾಲ್ಗೊಂಡ ತಂಡದ ಎಲ್ಲ ಸದಸ್ಯರಿಗೂ ಪ್ರಮಾಣ ಪತ್ರ ದೊರೆಯಲಿದೆ.

ಹೆಸರು ನೋಂದಾಯಿಸಲು ಇದೇ ದಿನಾಂಕ 28 ಕೊನೆಯ ದಿನವಾಗಿದೆ. ಮಾಹಿತಿಗಾಗಿ ಮೊ.ಸಂ. 9902409238, 9008685715, 9242881170 ಅಥವಾ ವೆಬ್‌ಸೈಟ್ ವಿಳಾಸ http://spatikalingashreekshetra.com ಗೆ ಸಂಪರ್ಕಿಸಬಹುದಾಗಿದೆ ಎಂದು ರಂಭಾಪುರಿ ಶಾಖಾ ಹಿರೇಮಠದ ಪೀಠಾಧ್ಯಕ್ಷ ಶ್ರೀ ವೀರಭದ್ರ ಶಿವಾಚಾರ್ಯರು ತಿಳಿಸಿದ್ದಾರೆ.


**ಹತ್ತನೇ ವರ್ಷದ ಪುಣ್ಯಸ್ಮರಣೆ**



ನಮ್ಮ ಕುಟುಂಬದ
"ಬಂಗಾರದ ಮನುಷ್ಯನಿಗೆ"
ನಮನಗಳು.
ಇಲಾಖಾದಾರ ಮಠದ
ಶ್ರೀ ಎಂ.ವಿ.
ಕಲ್ಯಾಣಯ್ಯನವರು
(ನಿವೃತ್ತ ಶಿಕ್ಷಕರು)

ಸದಾ ನಿಮ್ಮ ನೆನಪಿನಲ್ಲಿರುವ ನಿಮ್ಮ ಸಮಸ್ತ ಕುಟುಂಬ ವರ್ಗ.
ನಿನ್ನೆ ಮೊನ್ನೆ ನಿನ್ನ ಜೊತೆ ಇದ್ದ ಹಾಗೆ...
ನಿನ್ನೆ ಮೊನ್ನೆ ನಿನ್ನ ಜೊತೆ ಮಾತನಾಡಿದ ಹಾಗೆ..
ನಿನ್ನೆ ಮೊನ್ನೆ ನಿನ್ನ ಜೊತೆ ಮನದುಂಬಿ ನಕ್ಕ ಹಾಗೆ...
ಹಾಗೆ.. ಹೀಗೆ.. ಎಷ್ಟೋ ಕ್ಷಣಗಳ ಕಳೆದ ಹಾಗೆ ಅನಿಸಿರುವುದರ ನಡುವೆ...
ನೀನಿಲ್ಲದ ಈ ಹತ್ತು ಸಂವತ್ಸರಗಳು ಉರುಳಿದ್ದಾವೆ ಹತ್ತು ಕ್ಷಣಗಳ ಹಾಗೆ...
ನಿನ್ನೊಲುಮೆ ತುಂಬಿದ ಆಶೀರ್ವಾದದ ನೆರಳಲ್ಲಿ ಸಾಗಿಹ ನಿನ್ನ ಪ್ರೀತಿ ಪಾತ್ರರು...

ಶ್ರೀಮತಿ ಕೆ.ಎಂ. ಚಂದ್ರಮತಿ ಶ್ರೀ ಎಂ.ವಿ. ಚಂದ್ರಶೇಖರಯ್ಯ
ಮತ್ತು ಕುಟುಂಬ ವರ್ಗ, ದಾವಣಗೆರೆ


## 20 ಲಕ್ಷ ಟನ್ ಗೋಧಿ ಬಿಡುಗಡೆ

ನವದೆಹಲಿ, ಫೆ. 21 – ಏರುತ್ತಿರುವ ಗೋಧಿ ಬೆಲೆ ನಿಯಂತ್ರಿಸುವ ಸಲುವಾಗಿ ಕೇಂದ್ರ ಸರ್ಕಾರ 20 ಲಕ್ಷ ಟನ್‌ಗಳನ್ನು ಹೆಚ್ಚುವರಿಯಾಗಿ ಮಾರುಕಟ್ಟೆಗೆ ಬಿಡಲಿದೆ. ತನ್ನ ದಾಸ್ತಾನಿನಿಂದ 30 ಲಕ್ಷ ಟನ್ ಗೋಧಿಯನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರುವುದಾಗಿ ಕೇಂದ್ರ ಸರ್ಕಾರ ಜನವರಿ 25ರಂದು ಘೋಷಿಸಿತ್ತು. ಈ ವರ್ಷ ಒಟ್ಟಾರೆ 50 ಲಕ್ಷ ಟನ್ ಗೋಧಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಲಿದೆ.

## ನಗರದಲ್ಲಿ ಇಂದು ಜವಳ ಕಾರ್ಯಕ್ರಮ

ಲೇಬರ್ ಕಾಲೋನಿ 6 ನೇ ಕ್ರಾಸ್‌ನಲ್ಲಿರುವ ಶ್ರೀ ಗುರು ಕರಿಬಸವೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ಶ್ರೀ ಗುರು ಕರಿಬಸವೇಶ್ವರಸ್ವಾಮಿಯ ಜಾಗರಣೆಯ ಮಹೋತ್ಸವದ ಅಂಗವಾಗಿ ಇಂದು ಮತ್ತು ನಾಳೆ ಜವಳ, ಶುಭ ಕಾರ್ಯಕ್ರಮಗಳು ಮತ್ತು ಫಳಾರ ಹಾಕಲಾಗುವುದು.

## ಹರಿಹರ: ಹಣ ನೀಡಿದ್ದರೂ ನಿರೀಕ್ಷಿತ ಅಭಿವೃದ್ಧಿಯಾಗಿಲ್ಲ



ನಗರಸಭೆ ಸಾಮಾನ್ಯ ಸಭೆಯಲ್ಲಿ ಆಕ್ಷೇಪ

ಹರಿಹರ, ಫೆ. 21 - ಕಳೆದ ಹಲವಾರು ವರ್ಷಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಗರಾಭಿವೃದ್ಧಿಗಾಗಿ ವಿವಿಧ ಯೋಜನೆಗಳ ಹೆಸರಿನಲ್ಲಿ ಹಣ ನೀಡಿದರೂ, ನಿರೀಕ್ಷಿಸಿದ ಪ್ರಮಾಣದಲ್ಲಿ ನಗರವು ಅಭಿವೃದ್ಧಿ ಹೊಂದಿಲ್ಲವೆಂದು ನಗರಸಭೆಯ ಹಿರಿಯ ಸದಸ್ಯ ಶಂಕರ್ ಖಟಾವ್ಕರ್ ಆರೋಪಿಸಿದರು.

ನಗರಸಭೆಯ ಅಧ್ಯಕ್ಷೆ ಶಾಹಿನಾ ದಾದಾ ಪೀರ್ ಭಾನುವಳ್ಳಿ ಅವರ ಅಧ್ಯಕ್ಷತೆಯಲ್ಲಿ ನಗರಸಭೆ ಸಭಾ ಭವನದಲ್ಲಿ ಮಂಗಳವಾರ ಕರೆದಿದ್ದ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ನಗರದ ರಸ್ತೆಗಳು, ಪಾರ್ಕ್‌ಗಳು, ಸಾರ್ವಜನಿಕ ಆಸ್ಪತ್ರೆಯ ಆವರಣ ಅಭಿವೃದ್ಧಿ ಕಂಡಿಲ್ಲ. ಹರಿಹರೇಶ್ವರ ದೇವಸ್ಥಾನ ನೋಡಲು ನಿತ್ಯ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಆದರೆ, ದೇವಸ್ಥಾನ ಯಾವ ಸ್ಥಳದಲ್ಲಿದೆ ಎಂಬುದನ್ನು ತೋರಿಸುವ ಮಾರ್ಗಸೂಚಿ ನಾಮಫಲಕಗಳು ಈ ಊರಿನಲ್ಲಿ ಹಾಗೂ ನಗರದ ಹೊರಗೆ ಇಲ್ಲ. ಅದಕ್ಕೆ ನಗರಸಭೆ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು. ವಿವಿಧ ರೀತಿಯಿಂದ ನಗರವನ್ನು ಅಭಿವೃದ್ಧಿ ಪಡಿಸುವ ಕುರಿತು ನಗರಸಭೆಯ ಉಪಾಧ್ಯಕ್ಷ ವಾಮನಮೂರ್ತಿ, ಸದಸ್ಯರಾದ ಎಂ.ಜಂಬಣ್ಣ, ಹನುಮಂತಪ್ಪ ಎ.ಕೆ., ವಸಂತ ಎಸ್.ಎಂ., ನಾಗರತ್ನಮ್ಮ ಎನ್.ಕೆ., ಕೆ.ಜಿ.ಸಿದ್ದೇಶ್, ಸುಮಿತ್ರಮ್ಮ ಕೆ., ಸೈಯದ್ ಅಬ್ದುಲ್ ಅಲಿಮ್ ಚರ್ಚಿಸಿದರು.

ನಗರಸಭೆಯ ಪ್ರವೇಶ ದ್ವಾರದ ಅಕ್ಕಪಕ್ಕದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವುದು ಬೇಡ. ಈ ಹಿಂದೆ ಇಲ್ಲಿದ್ದ ವಾಣಿಜ್ಯ ಮಳಿಗೆಗಳನ್ನು ನೆಲಸಮ ಗೊಳಿಸಿದ ನಂತರ ಬಾಡಿಗೆದಾರರು ಪುನಃ ಮಳಿಗೆಗಳನ್ನು ನಿರ್ಮಿಸಿಕೊಂಡುವಂತೆ ಒತ್ತಾಯಿಸಿ, ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಆ ಫಲಾನುಭವಿಗಳಿಗೆ ಬೇರೆಡೆ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ವ್ಯವಸ್ಥೆ ಮಾಡಲು ಸಭೆ ಒಪ್ಪಿಗೆ ನೀಡಿತು.

ನಗರದ ಹಿಂದೂ ರುದ್ರಭೂಮಿ ಟ್ರಸ್ಟ್‌ನವರಿಗೆ ಸ್ಮಶಾನ ಜಾಗವನ್ನು ಹಸ್ತಾಂತರ ಮಾಡದಿರುವ ಕಾರಣ ತೊಂದರೆಯಾಗಿದ್ದು, ಮುಂದಿನ ದಿನಮಾನಗಳಲ್ಲಿ ಹಸ್ತಾಂತರಿಸಲು ಚರ್ಚಿಸಲಾಯಿತು.

2016 ರಿಂದ 2020ನೇ ಸಾಲಿನವರೆಗಿನ ಸಾಮಾನ್ಯ ನಿಧಿ ಅನುದಾನದಲ್ಲಿ ನಗರದ ಆಯ್ದ ವಿಕಲ ಚೇತನರಿಗೆ ತ್ರಿಚಕ್ರ ವಾಹನಗಳನ್ನು ಖರೀದಿಸಿ ವಿತರಿಸಲು ಸಭೆ ಒಪ್ಪಿಗೆ ನೀಡಿತು. ರೈಲ್ವೆ ನಿಲ್ದಾಣದ ಎದುರಿಗೆ ಇರುವ ಕೇಶವ ನಗರ, ಕೆ. ಆರ್. ನಗರ, ವಿಜಯ ನಗರ, ಟಿಪ್ಪು ನಗರ, ಬಾಂಗ್ಲಾ ಬಡಾವಣೆ, ಅಮರಾವತಿ ನಗರಗಳ ಸಾರ್ವಜನಿ ಕರಿಗೆ ಅನುಕೂಲ ಕಲ್ಪಿಸಲು ರೈಲ್ವೆ ಲೈನ್ ಅಂಡರ್ ಪಾಸ್ ಅಥವಾ ಓವರ್ ಬ್ರಿಡ್ಜ್ ನಿರ್ಮಿಸಿ ಕೊಡಬೇಕೆಂದು ರೈಲ್ವೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಪತ್ರ ಬರೆಯಲು ಸಭೆಯಲ್ಲಿ ನಿರ್ಧರಿಸಲಾಯಿತು. ಪೌರಾಯುಕ್ತ ಬಸವರಾಜ ಐಗೂರು, ಸದಸ್ಯರುಗಳಾದ ರಜನಿ ಕಾಂತ್, ಉಷಾ ಮಂಜುನಾಥ್, ವಿಜಯ ಕುಮಾರ ಬಿ.ಎಂ., ಅಶ್ವಿನಿ ಕೃಷ್ಣ, ಫಕ್ಕೀರಮ್ಮ ರೇವಣಸಿದ್ದಪ್ಪ, ಅಲ್ತಾಫ್, ಜಾವಿದ್, ಕೆ.ಜಿ. ಸಿದ್ದೇಶ್, ಕವಿತಾ ಮಾರುತಿ, ಪಾರ್ವತಮ್ಮ ಐರಣಿ ಸೇರಿದಂತೆ ಅನೇಕರು ಸಭೆಯಲ್ಲಿ ಚರ್ಚಿಸಿದರು.

## ಸಚಿವ ಅಶ್ವತ್ಥ್ ನಾರಾಯಣ್ ವಿರುದ್ಧ ಕುರುಬ ಸಮಾಜದಿಂದ ಪ್ರತಿಭಟನೆ



ಹೊನ್ನಾಳಿ

ಹೊನ್ನಾಳಿ, ಫೆ.21- ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಅವಹೇಳನ ಕಾರಿ ಹೇಳಿಕೆ ನೀಡಿರುವ ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥ್ ನಾರಾಯಣ್ ವಿರುದ್ಧ ಇಲ್ಲಿನ ಕುರುಬ ಸಮಾಜದ ಮುಖಂಡರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಬಸವೇಶ್ವರ ಟಾಕೀಸ್‌ನಿಂದ ಪ್ರಾರಂಭವಾದ ಮೆರವಣಿಗೆ ವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಸೇರಿ ಸಚಿವರ ವಿರುದ್ಧ ಘೋಷಣೆ ಕೂಗಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ.ಮಂಜಪ್ಪ ಮಾತನಾಡಿ, ತಾವೊಬ್ಬ ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿ ಎಂಬುದನ್ನು ಮರೆತು, ಪ್ರತಿಪಕ್ಷ ನಾಯಕರಾದ ಸಿದ್ದರಾಮಯ್ಯ ಅವರನ್ನು ಟಿಪ್ಪು ಸುಲ್ತಾನ್ ರೀತಿಯಲ್ಲಿ ಹೊಡೆದುರುಳಿಸಬೇಕೆಂದು ವಿವಾದಾತ್ಮಕ ಹೇಳಿಕೆ ನೀಡಿರುವುದು ಅಕ್ಷಮ್ಯ ಅಪರಾಧವೆಂದು ಕಿಡಿ ಕಾರಿದರು.

ಕಿಸಾನ್ ಸೆಲ್ ಅಧ್ಯಕ್ಷ ಎಚ್.ನರಸಪ್ಪ, ಸಮಾಜದ ಕಾರ್ಯಾಧ್ಯಕ್ಷ ಧರ್ಮಪ್ಪ ಮಾತನಾಡಿದರು.

ಕುರುಬ ಸಮಾಜದ ಉಪಾಧ್ಯಕ್ಷ ಕೆ.ಪುಟ್ಟಪ್ಪ, ಎಚ್.ಎ.ಧರ್ಮಪ್ಪ, ಪ.ಪಂ ಸದಸ್ಯರಾದ ಹೆಚ್. ಡಿ.ವಿಜೇಂದ್ರಪ್ಪ, ರಾಜೇಂದ್ರ, ಮಾಜಿ ಸದಸ್ಯ ಎಚ್. ಬಿ.ಅಣ್ಣಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಎ.ಜಿ. ಪ್ರಕಾಶ್, ಮುಖಂಡರುಗಳಾದ ಸರಳಿನಮನೆ ರಾಜಪ್ಪ, ಮಟ್ಟಿ ನರಸಿಂಹಪ್ಪ, ಬೂದೇಶ್, ಬಿ. ಕೆ.ಮಾದಪ್ಪ, ಬೆಂಕಿ ಚಂದ್ರು, ನಾಗರಾಜ್ ಕುಳಗಟ್ಟೆ, ಎಂ.ಎಸ್.ಮುಂಜುನಾಥ್, ಸೋಮಶೇಖರ್, ಚಮನ್ ಸಾಬ್, ಇಫ್ತಿಕಾರ್ ಅಹ್ಮದ್, ಬೇವಿನಹಳ್ಳಿ ನಾಗರಾಜ್, ಕಿಸಾನ್ ಸೆಲ್‌ನ ಸೊರಟೂರು ಹನುಮಂತಪ್ಪ, ಕೋಟೆಮಲ್ಲೂರು ಮಹೇಶ್ವರಪ್ಪ, ಬೇಲಿ ಮಲ್ಲೂರು ಮಂಜಪ್ಪ ಮತ್ತಿತರರು ಉಪಸ್ಥಿತರಿದ್ದರು.

# ವೃತ್ತಿಪರ ಛಾಯಾಗ್ರಾಹಕರ ಸಂಘಟನೆಗಳ ಒಕ್ಕೂಟ ಲೋಕಾರ್ಪಣೆ

## ಅಸಂಘಟಿತರಿಗೆ ಸರ್ಕಾರಿ ಸೌಲಭ್ಯ ಒದಗಿಸುವ ಭರವಸೆ

ದಾವಣಗೆರೆ, ಫೆ. 21 - ಬದಲಾಗುವ ತಂತ್ರಜ್ಞಾನದ ಜೊತೆ ಕೌಶಲ್ಯ ರೂಢಿಸಿಕೊಂಡಲ್ಲಿ, ಏನೇ ಸಮಸ್ಯೆ ಎದುರಾದರೂ ಚಾಕಚಕ್ಯತೆಯಿಂದ ಎದುರಿಸುವ ಸಾಮರ್ಥ್ಯ ಸಿಗುತ್ತದೆ ಎಂದು ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ವೈ. ಪ್ರಕಾಶ್ ತಿಳಿಸಿದರು.

ನಗರದ ಬಿಐಇಟಿ ಕಾಲೇಜು ಆವರಣದಲ್ಲಿರುವ ಎಸ್. ಎಸ್. ಮಲ್ಲಿಕಾರ್ಜುನ್ ಕಲ್ಚರಲ್ ಸೆಂಟರ್‌ನಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ರಾಜ್ಯ ವೃತ್ತಿಪರ ಛಾಯಾಗ್ರಾಹಕ ಸಂಘಟನೆಗಳ ಒಕ್ಕೂಟದ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಛಾಯಾಗ್ರಾಹಕರು ಸಮಾಜದ ಓರೆ ಕೋರೆಗಳನ್ನು ಪ್ರತಿಬಿಂಬವಾಗಿ ತೋರಿಸುತ್ತಾರೆ. ಕೊರೊನಾ ಸಮಯದಲ್ಲಿ ಎಡರು ತೊಡರುಗಳು ಎದುರಾದರೂ, ನಂತರ ಈ ವಲಯ ಚೇತರಿಸಿಕೊಂಡಿದೆ ಎಂದು ಹೇಳಿದರು.

ಸ್ಟುಡಿಯೋ, ವನ್ಯಜೀವಿ, ವೃತ್ತಿಪರ ಛಾಯಾಗ್ರಹಣ, ಮಾಧ್ಯಮ ಸೇರಿದಂತೆ ಹಲವಾರು ವಲಯಗಳಲ್ಲಿ ಛಾಯಾಗ್ರಾಹಕರಿಗೆ ಅವಕಾಶಗಳಿವೆ ಎಂದವರು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯ ವೃತ್ತಿಪರ ಛಾಯಾಗ್ರಾಹಕರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ವಿಲ್ಸನ್ ಜಾರ್ಜ್ ಗೊನ್ಸಾಲ್ವಿಸ್, ಛಾಯಾಗ್ರಾಹಕರ ಸಮಸ್ಯೆಗಳಿಗೆ ಸರ್ಕಾರದಿಂದ ಸೂಕ್ತ ಸ್ಪಂದನೆ ಸಿಗುತ್ತಿಲ್ಲ. ಛಾಯಾಗ್ರಾಹಕರಿಗೆ ಅಸಂಘಟಿತ ವಲಯದ ಸೌಲಭ್ಯಗಳು ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ, ಛಾಯಾಗ್ರಾಹಕರಿಗೆ ನೆರವಾಗಲು ಒಕ್ಕೂಟ ಸ್ಥಾಪಿಸಲಾಗಿದೆ ಎಂದರು.

ವೇದಿಕೆಯ ಮೇಲೆ ಒಕ್ಕೂಟದ ಉಪಾಧ್ಯಕ್ಷರಾದ ಕೆ. ರಾಮಣ್ಣ, ಶ್ರೀಧರ್, ಖಜಾಂಚಿ ಚಂದ್ರಶೇಖರಯ್ಯ ಹಿರೇಮಠ್ ಮತ್ತಿತರರು ಉಪಸ್ಥಿತರಿದ್ದರು.

ಸುಧ ಹಾಗೂ ವಿಮಲ ಪ್ರಾರ್ಥಿಸಿದರು. ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಜೆ.ಜಿ. ವಿಜಯಕುಮಾರ್ ಸ್ವಾಗತಿಸಿದರು. ಸಾರ್ವಜನಿಕ ಸಂಪರ್ಕಾಧಿಕಾರಿ ಜಿ.ಎಸ್. ಬಾಬು ನಿರೂಪಿಸಿದರು.



# ಭಕ್ತ ಸಾಗರದ ನಡುವೆ ಉಕ್ಕಡಗಾತ್ರಿ ರಥೋತ್ಸವ





ಮಲೇಬೆನ್ನೂರು, ಫೆ. 21- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಮಹಾ ರಥೋತ್ಸವವು ಮಂಗಳವಾರ ಬೆಳಿಗ್ಗೆ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರು ಸಂಪ್ರದಾಯ ದಂತೆ ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ಅಜ್ಜಯ್ಯನ ಮೂರ್ತಿಯನ್ನು ಹೊತ್ತಿದ್ದ ರಥದ ಗಾಲಿಗಳಿಗೆ ಭಕ್ತರು ತೆಂಗಿನಕಾಯಿ ಒಡೆದು ಅಜ್ಜಯ್ಯನಿಗೆ ಜೈಕಾರ ಹಾಕಿ ರಥ ಎಳೆದರು. ಇನ್ನಷ್ಟು ಭಕ್ತರು ಮಂಡಕ್ಕಿ, ಮೆಣಸಿನ ಕಾಳು, ಬಾಳೆಹಣ್ಣು, ಮೆಕ್ಕೆಜೋಳ, ಊಟದ ಜೋಳ, ರಾಗಿ, ಹುರುಳಿ ಕಾಳುಗಳನ್ನು ರಥದ ಮೇಲೆ ಎಸೆದು ಭಕ್ತಿ ಸಮರ್ಪಿಸಿದರು.

ಡೊಳ್ಳು, ಭಜನೆ, ಹಲಗೆ, ವೀರಗಾಸೆ, ಕೀಲುಕುಣಿತ, ಗೊಂಬೆ ಕುಣಿತ ಸೇರಿದಂತೆ ವಿವಿಧ ಕಲಾ ಮೇಳಗಳು ರಥೋತ್ಸವಕ್ಕೆ ಮೆರಗು ತಂದವು.

ಹೊರ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಗೋವಾ, ಮಹಾರಾಷ್ಟ್ರ ಸೇರಿದಂತೆ ರಾಜ್ಯದ ನಾನಾ ಭಾಗ ಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ರಥದ ಮೇಲೆ ಎಸೆದಿದ್ದ ದ್ವಿದಳ ಧಾನ್ಯಗಳನ್ನು ರಥೋತ್ಸವದ ನಂತರ ಜನರು ಆಯ್ದುಕೊಂಡು ಮನೆಗೆ ತೆಗೆದುಕೊಂಡು ಹೋದರು. ಈ ಕಾಳುಗಳನ್ನು ಹೊಲಕ್ಕೆ ಹಾಕಿದರೆ ಬೆಳೆ ಹುಲುಸು ಬರುತ್ತದೆ ಎಂಬ ನಂಬಿಕೆ ಭಕ್ತರಲ್ಲಿದೆ.

ದೇವಸ್ಥಾನದ ಕಲ್ಯಾಣ ಮಂಟಪ, ವಸತಿ ನಿಲಯಗಳು, ದೇವಸ್ಥಾನದ ಆವರಣ ಜನರಿಂದ ಭರ್ತಿಯಾಗಿದ್ದವು. ತುಂಗಭದ್ರಾ ನದಿ ದಡ ಹಾಗೂ ನಡುಗಡ್ಡೆಗಳಲ್ಲಿ ಜನ ಬಿಡಾರ ಹಾಕಿ ತಂಗಿದ್ದರು. ಬಹಳಷ್ಟು ಜನ ಭಕ್ತರು ತುಂಗಭದ್ರಾ ನದಿ ದಡದಲ್ಲೇ ಅಡುಗೆ ಮಾಡಿ ಗಂಗಾಪೂಜೆ ಮೂಲಕ ಎಡೆ ಮಾಡಿದರು.

ನದಿಯಲ್ಲಿ ಪುಣ್ಯಸ್ನಾನ ಮಾಡಿದ ಭಕ್ತರು, ನಿಂಬೆಹಣ್ಣಿನ ರಾಶಿಯ ಮೇಲೆ ದೀಡು ನಮಸ್ಕಾರ ಹಾಕುತ್ತಿದ್ದುದು ಗಮನ ಸೆಳೆಯಿತು. ಭಕ್ತರು ಸರದಿ ಸಾಲಿನಲ್ಲಿ ನಿಂತು ಅಜ್ಜಯ್ಯನ ಗದ್ದುಗೆ ದರ್ಶನ ಪಡೆದು ಫಳಾರ ಪೂಜೆ ಮಾಡಿದರು.

ಈ ಬಾರಿ ಕ್ಷೇತ್ರದಲ್ಲಿ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಿದ್ದರಿಂದ ಮತ್ತು ಜನರಿಗೆ ಮೈಕ್‌ನಲ್ಲಿ ಸತತವಾಗಿ ಅರಿವು ಮೂಡಿಸುತ್ತಿದ್ದ ಕಾರಣ ದೇವಸ್ಥಾನದ ಆವರಣದಲ್ಲಿ ಸ್ವಚ್ಛತೆ ಕಂಡು ಬಂತು.

ಎಸ್ಪಿ ರಿಷ್ಯಂತ್, ಎಎಸ್ಪಿ ಬಸರಗಿ, ಡಿವೈಎಸ್ಪಿ ಕನ್ನಿಕಾ ಸಿಕ್ರಿವಾಲ್ ಅವರ ನಿರ್ದೇಶನದಲ್ಲಿ ಹರಿಹರ ಸಿಪಿಐ ಗೌಡಪ್ಪಗೌಡ್ರು, ಮಲೇಬೆನ್ನೂರು ಪಿಎಸ್‌ಐ ಪ್ರಭು ಕೆಳಗಿನಮನೆ, ಎಎಸ್‌ಐ ಶ್ರೀನಿವಾಸ್ ನೇತೃತ್ವದಲ್ಲಿ 200ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಬಂದೋಬಸ್ತ್ ಕೈಗೊಂಡಿದ್ದರು.

ಇದೇ ದಿನಾಂಕ 27ರವರೆಗೆ ಅಜ್ಜಯ್ಯನ ಮಹಾಶಿವರಾತ್ರಿ ಜಾತ್ರಾ ಕಾರ್ಯಕ್ರಮಗಳು ಜರುಗಲಿದ್ದು, ಕ್ಷೇತ್ರಕ್ಕೆ ಆಗಮಿಸುವ ಎಲ್ಲಾ ಭಕ್ತರಿಗೆ ಅನ್ನ ಸಂತರ್ಪಣೆ ಹಾಗೂ ವಸತಿ ವ್ಯವಸ್ಥೆ ಮಾಡಲಾಗುವುದೆಂದು ದೇವಸ್ಥಾನದ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

# ಕೆರೆಯಲ್ಲಿ ಅಕ್ರಮ ಮಣ್ಣು, ಮರಳು ಸಾಗಾಟ

## ಜಗಳೂರು; ವಿವಿಧ ಗ್ರಾಮಸ್ಥರಿಂದ ದೂರು: ಕ್ರಮಕ್ಕೆ ಜಿಲ್ಲಾಧಿಕಾರಿ ಸೂಚನೆ

ಜಗಳೂರು, ಫೆ.21- ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಬಂದಿದ್ದ ಗ್ರಾಮಸ್ಥರು ಸಮಸ್ಯೆ, ಬೇಡಿಕೆ ಮತ್ತು ದೂರುಗಳನ್ನು ಸಲ್ಲಿಸಿ ಕ್ರಮಕ್ಕಾಗಿ ಮನವಿ ಮಾಡಿಕೊಂಡರು.

ತಾಲ್ಲೂಕಿನ ಮುಷ್ಟಿಗರಹಳ್ಳಿ ಗ್ರಾಮದ ಕೆರೆಯಲ್ಲಿ ಅಕ್ರಮವಾಗಿ ಮಣ್ಣು ಮತ್ತು ಮರಳನ್ನು ಸಾಗಾಟ ಮಾಡುತ್ತಿದ್ದು ಈ ಬಗ್ಗೆ ಗ್ರಾಮ ಪಂಚಾಯಿತಿಗೆ ದೂರು ನೀಡಿದರೂ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮದ ಮಂಜಪ್ಪ ಮತ್ತು ಇತರರು ಜಿಲ್ಲಾಧಿಕಾರಿಗೆ ದೂರು ಸಲ್ಲಿಸಿದರು.

ರಾತ್ರಿ ವೇಳೆ ಬೃಹತ್ ಲಾರಿಗಳಲ್ಲಿ ಕೆರೆಯ ಮಣ್ಣು ಮತ್ತು ಮರಳನ್ನು ಸಾಗಾಟ ಮಾಡಲಾಗುತ್ತಿದ್ದರೂ ಕೂಡ ಯಾವುದೇ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅವರು ದೂರಿದರು.

ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ, ತಾ.ಪಂ ಇಓ ಚಂದ್ರಶೇಖರ್ ಮತ್ತು ತಹಶೀಲ್ದಾರ್ ಅವರಿಗೆ ಸೂಚನೆ ನೀಡಿದರು. ಪಟ್ಟಣದಲ್ಲಿ ವಾಸಿಸುತ್ತಿರುವ ಅಲೆಮಾರಿ ಜನಾಂಗದ ಬಹುದಿನದ ಬೇಡಿಕೆಯಾದ ನಿವೇಶನ ನೀಡುವ ಕುರಿತು ಮನವಿ ಮಾಡಿದ ಜನಾಂಗದ ಮುಖಂಡರು ಎಲ್ಲಿಯಾದರೂ ನಿವೇಶನ ನೀಡಿ ಸಮಸ್ಯೆಗೆ ಸ್ಪಂದಿಸಬೇಕೆಂದು ಮನವಿ ಮಾಡಿದರು.

ರಾಮಾಲಯ ರಸ್ತೆಯಲ್ಲಿ ಉಂಟಾಗಿರುವ ಟ್ರಾಫಿಕ್ ಜಾಮ್, ಅನವಶ್ಯಕ ವಾಹನಗಳ ನಿಲುಗಡೆ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಈ ಭಾಗದ ಸಾರ್ವಜನಿಕರು ಜಿಲ್ಲಾಧಿಕಾರಿಗೆ ಮನವಿ ನೀಡಿದರು.

ತಹಶೀಲ್ದಾರ್ ಕಚೇರಿಯಲ್ಲಿ ವಿದ್ಯುನ್ಮಾನ ಮತ ಯಂತ್ರ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿತ್ತು. ವಿವಿಪ್ಯಾಟ್ ಕಾರ್ಯವೈಖರಿ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ. ಸಾರ್ವಜನಿಕರು ಇವಿಎಂ ಬಳಕೆಯ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಮನವಿ ಮಾಡಿದರು.

ನಂತರ ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಭೇಟಿ ನೀಡಿ ಮತಯಂತ್ರ ರವಾನೆ ಹಾಗೂ ಸಂಗ್ರಹಣಾ ಕೇಂದ್ರವನ್ನು ಪರಿವೀಕ್ಷಿಸಿ ಚುನಾವಣೆ ಸಂದರ್ಭದಲ್ಲಿ ಅಗತ್ಯ ಮೂಲಸೌಕರ್ಯ, ಮತ ಯಂತ್ರಗಳ ಭದ್ರತೆ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ತಹಶೀಲ್ದಾರ್ ಜಿ. ಸಂತೋಷ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ವೆಂಕಟೇಶ್ ಮೂರ್ತಿ, ತಾ.ಪಂ ಇಓ ಚಂದ್ರಶೇಖರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.



### ಗುಣಮಟ್ಟದ ರಾಗಿ ಖರೀದಿಸಿ: ಜಿಲ್ಲಾಧಿಕಾರಿ ಸೂಚನೆ

ಜಗಳೂರು, ಫೆ.21- ಸಣ್ಣ ರೈತರು ರಾಗಿ ಖರೀದಿ ಕೇಂದ್ರ ಸದ್ಬಳಕೆ ಮಾಡಿಕೊಳ್ಳಬೇಕು ಮತ್ತು ಗುಣಮಟ್ಟದ ರಾಗಿ ಮಾರಾಟ ಮಾಡಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹೇಳಿದರು.

ಪಟ್ಟಣದ ಎಪಿಎಂಸಿ ಕಚೇರಿ ಆವರಣದಲ್ಲಿ ಇರುವ ರಾಗಿ ಖರೀದಿ ಕೇಂದ್ರಕ್ಕೆ ದಿಢೀರ್ ಭೇಟಿ ನೀಡಿ, ತೂಕ ಮತ್ತು ಗ್ರೇಡ್ ಗುಣಮಟ್ಟ ಪರೀಕ್ಷಿಸಿ ನಂತರ ಅವರು ಮಾತನಾಡಿದರು. ಅಗತ್ಯ ದಾಖಲಾತಿಗಳನ್ನು ಪಡೆದು ಓಟಿಪಿ ಸಂಖ್ಯೆಯ ಮೂಲಕವೇ ರಾಗಿ ಖರೀದಿಸಬೇಕು. ಖರೀದಿ ಕೇಂದ್ರದಲ್ಲಿ ಪ್ರತಿ ಕ್ವಿಂಟಾಲ್‌ಗೆ 3578 ರೂ. ದರ ನಿಗದಿಪಡಿಸಲಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ರೈತರಿಗೆ ತಿಳಿಸಿದರು.

**ಮ್ಯಾನೇಜರ್‌ಗೆ ತರಾಟೆ:** ಖರೀದಿ ಕೇಂದ್ರದ ಮ್ಯಾನೇಜರ್ ಶಂಕರ್ ಹಾಗೂ ಇತರೆ ಅಧಿಕಾರಿಗಳಿಗೆ ಗ್ರೇಡ್ ಯಂತ್ರ, ಮತ್ತು ಜರಡಿ ಬಳಸಿ ಸ್ವಚ್ಛತೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿರುವುದನ್ನು ಕಂಡು ತರಾಟೆ ತೆಗೆದುಕೊಂಡರು.

ಗುಣಮಟ್ಟದ ರಾಗಿ ಖರೀದಿಸಿಲ್ಲ, ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕುವ ಜೊತೆಗೆ ಸರಿಯಾಗಿ ತೂಕದ ಯಂತ್ರ ನಿರ್ವಹಿಸಬೇಕು. ಅರ್ಹ ಸಣ್ಣ ರೈತರಿಂದ ಮಾತ್ರ ರಾಗಿ ಖರೀದಿ ಮಾಡಬೇಕು ಎಂದು ಖಡಕ್ ಸೂಚನೆ ನೀಡಿದರು. ಜಿಲ್ಲಾಧಿಕಾರಿಯ ಆಗಮನದ ಹಿನ್ನೆಲೆಯಲ್ಲಿ ಖರೀದಿ ಕೇಂದ್ರದಲ್ಲಿ ಅಧಿಕಾರಿಗಳು ಜಾಗೃತಿಯಿಂದ ಕೆಲಸ ನಿರ್ವಹಿಸುತ್ತಿರುವುದು ಕಂಡು ಬಂದಿತು.

ಇದೇ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ದುರ್ಗಾಶ್ರೀ, ತಹಶೀಲ್ದಾರ್ ಜಿ.ಸಂತೋಷ್ ಕುಮಾರ್, ಎಪಿಎಂಸಿ ಕಾರ್ಯದರ್ಶಿ ಗಿರೀಶ್ ನಾಯ್ಕ ಇದ್ದರು.

# ರೋಹಿಣಿ, ರೂಪಾ ಇಬ್ಬರ ವರ್ಗಾವಣೆ



## ಇಬ್ಬರೂ ಅಧಿಕಾರಿಗಳ ಸಂಘರ್ಷಕ್ಕೆ ಕ್ರಮ ತೆಗೆದುಕೊಂಡ ಸರ್ಕಾರ

## ಹುದ್ದೆ ಸೂಚಿಸದೆ ವರ್ಗಾವಣೆ, ರೂಪಾ ಪತಿ ಮುನೀಶ್ ಮೌದ್ಗಿಲ್ ಕೂಡ ವರ್ಗ

ಬೆಂಗಳೂರು, ಫೆ. 21 - ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಮತ್ತು ಐಪಿಎಸ್ ಅಧಿಕಾರಿ ಡಿ. ರೂಪಾ ಮೌದ್ಗಿಲ್ ನಡುವೆ ಸಂಘರ್ಷ ತಾರಕಕ್ಕೇರಿದ ಬೆನ್ನಲ್ಲೇ ಅವರಿಗೆ ಹುದ್ದೆ ಸೂಚಿಸದೇ ಸರ್ಕಾರ ವರ್ಗಾವಣೆ ಮಾಡಿದೆ.

ಇಬ್ಬರು ಹಿರಿಯ ಅಧಿಕಾರಿಗಳ ಸಂಘರ್ಷ ತಾರಕಕ್ಕೇರಿದ ಬೆನ್ನಲ್ಲೇ ಎಚ್ಚೆತ್ತ ರಾಜ್ಯ ಸರ್ಕಾರ ಮುಖ್ಯಕಾರ್ಯದರ್ಶಿಯವರಿಂದ ವರದಿ ತರಿಸಿಕೊಂಡು ಇಬ್ಬರನ್ನೂ ವರ್ಗಾವಣೆ ಮಾಡಿದೆ.

ರೂಪಾ ಅವರ ಪತಿ ಐಎಎಸ್ ಅಧಿಕಾರಿ ಮುನೀಶ್ ಮೌದ್ಗಿಲ್ ಅವರನ್ನು ಆಡಳಿತ ಸುಧಾರಣೆ ಮತ್ತು ಸಿಬ್ಬಂದಿ ಇಲಾಖೆ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ.

ನಿನ್ನೆ ರಾತ್ರಿ ನಡೆದ ಸಂಪುಟ ಸಭೆಯಲ್ಲಿ ಅಧಿಕಾರಿಗಳ ವರ್ತನೆಯ ಬಗ್ಗೆ ಸಚಿವರು ಕೆಂಡಾಮಂಡಲವಾಗಿದ್ದಲ್ಲದೆ, ಅವರನ್ನು ಅಮಾನತ್ತು ಮಾಡಿ, ತಕ್ಷಣ ಕಾನೂನು ಕ್ರಮ ಜರುಗಿಸಬೇಕೆಂದು ಮುಖ್ಯಮಂತ್ರಿಯವರಿಗೆ ಒತ್ತಾಯಿಸಿ ದ್ದರು. ಇದೇ ಸಂದರ್ಭದಲ್ಲಿ ಕೇಂದ್ರದ ಗೃಹ ಮಂತ್ರಾಲಯದಿಂದಲೂ ಮುಖ್ಯ ಕಾರ್ಯದರ್ಶಿಯವರಿಗೆ ಅಧಿಕಾರಿಗಳ ವರ್ತನೆಯ ಬಗ್ಗೆ ಆಕ್ಷೇಪ ವ್ಯಕ್ತವಾಗಿತ್ತು.

ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡ ಮುಖ್ಯ ಮಂತ್ರಿಯವರು ನೋಟಿಸ್‌ಗೆ ಪೂರ್ಣ ವಿವರ ಬರುವ ವರೆಗೂ ಅವರಿಗೆ ಯಾವುದೇ ಹುದ್ದೆ ನೀಡದೇ ವರ್ಗಾವಣೆ ಮಾಡುವಂತೆ ಮುಖ್ಯಕಾರ್ಯದರ್ಶಿಯವರಿಗೆ ಸಭೆಯಲ್ಲೇ ಆದೇಶ ಮಾಡಿದ್ದರು.

ಮುಖ್ಯಮಂತ್ರಿಯವರ ಆದೇಶದಂತೆ ಇಂದು ಐವರು ಹಿರಿಯ ಅಧಿಕಾರಿಗಳನ್ನು ವರ್ಗಾವರ್ಗಿ ಮಾಡಿದ್ದು, ಅದರಲ್ಲಿ ಈ ಇಬ್ಬರಿಗೆ ಯಾವುದೇ ಹುದ್ದೆ ತೋರಿಸಿಲ್ಲ.

ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತ ರಾಗಿದ್ದ ರೋಹಿಣಿ ಸಿಂಧೂರಿ ಅವರ ಜಾಗಕ್ಕೆ ಕೌಶಲ್ಯಾಭಿ ವೃದ್ಧಿ, ಜೀವನೋಪಾಯ ಮತ್ತು ಉದ್ಯಮಶೀಲತೆ ವಿಭಾಗದ ಜಂಟಿ ಕಾರ್ಯದರ್ಶಿಯಾಗಿದ್ದ ಹೆಚ್. ಬಸವರಾಜೇಂದ್ರ, ಅವರನ್ನು ನೇಮಕ ಮಾಡಲಾಗಿದೆ.

ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಡಿ. ರೂಪಾ ಅವರ ಜಾಗಕ್ಕೆ ಹುದ್ದೆಯ ನಿರೀಕ್ಷೆಯಲ್ಲಿದ್ದ ಡಿ.ಭಾರತಿ ಅವರನ್ನು ನೇಮಕ ಮಾಡಲಾಗಿದೆ.

ಈ ಮಧ್ಯ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ರೂಪಾ ಮೌದ್ಗಿಲ್ ಪ್ರಕರಣಕ್ಕೆ ಸಂಬಂಧಿಸಿದಂತೆ, ಸೂಕ್ತ ಸಮಯದಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ ಅರಿವು ಸರ್ಕಾರಕ್ಕಿದೆ ಎಂದು ತಿಳಿಸಿದರು.

# ಕರ್ನಾಟಕ ಸಂಘದ 75ನೇ ವರ್ಷಾಚರಣೆ ಪ್ರಧಾನಿಯಿಂದ ಉದ್ಘಾಟನೆ

ನವದೆಹಲಿ, ಫೆ. 21 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೆಹಲಿ ಕರ್ನಾಟಕ ಸಂಘದ 75ನೇ ವರ್ಷಾಚರಣೆಯ ಉದ್ಘಾಟನೆಯನ್ನು ಫೆಬ್ರವರಿ 25ರಂದು ನೆರವೇರಿಸಲಿದ್ದಾರೆ. ಟಲ್ಕಟೊರಾ ಒಳಾಂಗಣ ಕ್ರೀಡಾಂಗಣದಲ್ಲಿ ಎರಡು ದಿನಗಳ ಕಾಲ ಈ ಸಮಾರಂಭ ನಡೆಯಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಜಿ. ಕಿಶನ್ ರೆಡ್ಡಿ, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸ್ಫಟಿಕಪುರದ ಶ್ರೀ ನಂಜಾವಧೂತ ಸ್ವಾಮೀಜಿ, ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿರಲಿದ್ದಾರೆ.

ಧರ್ಮಸ್ಥಳದ ವೀರೇಂದ್ರ ಹೆಗ್ಗಡೆ, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಬಿಜೆಪಿ ನಾಯಕ ಸಿ.ಟಿ. ರವಿ ಸಹ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

## 25 ಶತಕೋಟಿ ಡಾಲರ್ ನೆರವಿಗೆ ಎ.ಡಿ.ಬಿ. ಪ್ರಸ್ತಾವನೆ

ನವದೆಹಲಿ, ಫೆ. 21 – ಭಾರತದ ಬೆಳವಣಿಗೆಗಾಗಿ ಮುಂದಿನ ಐದು ವರ್ಷಗಳಲ್ಲಿ 20-25 ಶತಕೋಟಿ ಡಾಲರ್‌ಗಳ ಸಾಲ ನೀಡುವುದಾಗಿ ಏಷಿಯಾ ಅಭಿವೃದ್ಧಿ ಬ್ಯಾಂಕ್ (ಎ.ಡಿ.ಬಿ.) ಅಧ್ಯಕ್ಷ ಮಸತ್ಸುಗು ಅಸಕಾವ ಅವರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಬಳಿ ಪ್ರಸ್ತಾಪಿಸಿದ್ದಾರೆ. ಭಾರತದ ಮೂಲಭೂತ ಸೌಲಭ್ಯ, ಸಾಮಾಜಿಕ ಅಭಿವೃದ್ಧಿ ಹಾಗೂ ಪರಿಸರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮುಂದಿನ ಐದು ವರ್ಷಗಳಲ್ಲಿ ಈ ಹಣಕಾಸು ನೆರವು ನೀಡುವುದಾಗಿ ಎ.ಡಿ.ಬಿ. ಪ್ರಸ್ತಾಪಿಸಿದೆ. ಪ್ರಸಕ್ತ ಭಾರತದಲ್ಲಿ ಎ.ಡಿ.ಬಿ. 64 ಯೋಜನೆಗಳಲ್ಲಿ ಭಾಗಿಯಾಗಿದೆ. ಇವುಗಳ ಮೌಲ್ಯ 16 ಶತಕೋಟಿ ಡಾಲರ್ ಆಗಿದೆ.

## ಅಣು ಒಪ್ಪಂದದಿಂದ ಪುತಿನ್ ಹಿಂದಕ್ಕೆ

ಮಾಸ್ಕೊ, ಫೆ. 21 – ಉಕ್ರೇನ್ ಯುದ್ಧದಿಂದ ಹಿಂದೆ ಸರಿಯುವುದಿಲ್ಲ ಎಂದು ಹೇಳಿರುವ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುತಿನ್, ಅಮೆರಿಕದ ಜೊತೆಗಿನ ಅಣು ನಿಯಂತ್ರಣ ಒಪ್ಪಂದದಿಂದ ಹಿಂದೆ ಸರಿಯುವುದಾಗಿ ಹೇಳಿದ್ದಾರೆ. 2010ರಲ್ಲಿ ಅಮೆರಿಕ ಹಾಗೂ ರಷ್ಯಾಗಳು 'ನ್ಯೂ ಸ್ಟಾರ್ಟ್' ಎಂಬ ಅಣು ಒಪ್ಪಂದಕ್ಕೆ ಸಹಿ ಹಾಕಿದ್ದವು. ಆ ಮೂಲಕ ಉಭಯ ದೇಶಗಳ ಅಣ್ವಸ್ತ್ರಗಳ ಮೇಲೆ ಕಡಿವಾಣ ಹಾಕಲಾಗಿತ್ತು. ಅಮೆರಿಕ ಅಣ್ವಸ್ತ್ರಗಳ ಪರೀಕ್ಷೆಗೆ ಮುಂದಾದರೆ, ರಷ್ಯಾ ಸಹ ಪರೀಕ್ಷೆಗಳನ್ನು ನಡೆಸಲಿದೆ ಎಂದು ಪುತಿನ್ ಹೇಳಿದ್ದಾರೆ.

## ದೇವರಹಟ್ಟಿಯಲ್ಲಿ 25ರಂದು ತೇರು

ದಾವಣಗೆರೆ, ಫೆ. 21- ತಾಲ್ಲೂಕಿನ ದೇವರಹಟ್ಟಿಯ ಶ್ರೀ ಬಸವಣ್ಣನ ರಥೋತ್ಸವವು ಇದೇ ದಿನಾಂಕ 25ರ ಶನಿವಾರ ಸಂಜೆ 6.30 ಗಂಟೆಗೆ ನೆರವೇರಲಿದೆ.

26ರ ಭಾನುವಾರ ಸಂಜೆ 4 ಕ್ಕೆ ಬೆಲ್ಲದ ಬಂಡಿ, ಹೋರಿಗಳ ಮೆರವಣಿಗೆ ಜಾತ್ರೆ, ಸಂಜೆ 7.30ಕ್ಕೆ ಓಕಳಿ, ಗಂಗಾ ಪೂಜೆ, ದಿನಾಂಕ 27ರಂದು ಬೆಳಿಗ್ಗೆ 9 ಕ್ಕೆ ಪಲ್ಲಕ್ಕಿ ಸೇವೆ ನಡೆಯಲಿದೆ.

## ಕೋಳಿ ಸಾಕಾಣಿಕೆ ತರಬೇತಿ ನಾಳೆ

ದಾವಣಗೆರೆ, ಫೆ. 21 ರೈತರಿಗೆ ನಾಡಿದ್ದು ದಿನಾಂಕ 23 ಮತ್ತು 24 ರಂದು ನಗರದ ಪಶು ಆಸ್ಪತ್ರೆಯ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕೋಳಿ ಸಾಗಾಣಿಕೆ ತರಬೇತಿ ಶಿಬಿರ ನಡೆಯಲಿದೆ. ಸಂಪರ್ಕಿಸಿ : 08192-233787.

## ಸಾಲಕ್ಕಾಗಿ ತೆರಿಗೆ ಹೆಚ್ಚಿಸಿದ ಪಾಕ್

ಇಸ್ಲಾಮಾಬಾದ್, ಫೆ. 21 – ಐ.ಎಂ.ಎಫ್. ಸಾಲ ನೀಡಲು ವಿಧಿಸಿರುವ ಷರತ್ತುಗಳ ಅನ್ವಯ, ಪಾಕಿಸ್ತಾನ ತೆರಿಗೆಗಳನ್ನು ಹೆಚ್ಚಿಸಿದೆ.

ಮಿನಿ ಬಜೆಟ್ ಎಂದೇ ಬಣ್ಣಿಸಲಾಗುತ್ತಿರುವ ಹಣಕಾಸು ಪೂರಕ ಮಸೂದೆಗೆ ಪಾಕಿಸ್ತಾನದ ಕೆಳ ಮನೆ ಅಂಗೀಕಾರ ನೀಡಿದೆ. ಇದರ ಅನ್ವಯ ಐಷಾರಾಮಿ ಸರಕುಗಳ ಮೇಲಿನ ತೆರಿಗೆಯನ್ನು ಶೇ.17ರಿಂದ ಶೇ.25ಕ್ಕೆ ಹೆಚ್ಚಿಸಲಾಗುವುದು. ಸಾಮಾನ್ಯ ಮಾರಾಟ ತೆರಿಗೆಯನ್ನು ಶೇ.17ರಿಂದ 18ಕ್ಕೆ ಹೆಚ್ಚಿಸಲಾಗುವುದು. ಹೆಚ್ಚು ಆದಾಯ ಗಳಿಸುವವರು ಹೆಚ್ಚಿನ ತೆರಿಗೆ ಪಾವತಿಸುವ ಹಾಗೂ ಸಬ್ಸಿಡಿಯನ್ನು ಬಡವರಿಗಷ್ಟೇ ನೀಡುವ ವ್ಯವಸ್ಥೆ ಜಾರಿಗೆ ತರಬೇಕು ಎಂದು ಐ.ಎಂ.ಎಫ್. ತಿಳಿಸಿತ್ತು. ಮುಂದಿನ ದಿನಗಳಲ್ಲಿ ಇನ್ನಷ್ಟು ವೆಚ್ಚ ಕಡಿತದ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಹಣಕಾಸು ಸಚಿವ ಇಶಾಕ್ ದರ್ ತಿಳಿಸಿದ್ದಾರೆ. ಪಾಕಿಸ್ತಾನದ ಈ ಕ್ರಮಗಳಿಂದಾಗಿ ಅದು ಐ.ಎಂ.ಎಫ್.ನಿಂದ 1.1 ಶತಕೋಟಿ ಡಾಲರ್ ಸಾಲ ಪಡೆಯುವ ಹತ್ತಿರಕ್ಕೆ ಬಂದಿದೆ. ಆದರೆ, ಇನ್ನೂ 6.5 ಶತಕೋಟಿ ಡಾಲರ್ ಸಾಲ ಪಡೆಯಲು ಸಾಕಷ್ಟು ಬೆವರು ಹರಿಸಬೇಕಿದೆ.


**ಬೇಕಾಗಿದ್ದಾರೆ**

ಆಪೆ ಆಟೋ Diesel, LPG, CNG ಪ್ಯಾಸೆಂಜರ್, ಗೂಡ್ಸ್ ಆಪೆ ಆಟೋ ಎಲ್‌ಪಿಜಿ ತ್ರಿಚಕ್ರ ವಾಹನಗಳ ಶೋ ರೂಂನಲ್ಲಿ ಈ ಕೆಳಕಂಡ ಕೆಲಸ ಮಾಡಲು ಬೇಕಾಗಿದ್ದಾರೆ.

• ಸೇಲ್ಸ್ ಎಕ್ಸಿಕ್ಯೂಟಿವ್-4 • ಸ್ಪೇರ್ ಪಾರ್ಟ್ಸ್ ಸೂಪರ್‌ವೈಸರ್-1
• ವರ್ಕ್‌ಷಾಪ್ ಮ್ಯಾನೇಜರ್-1 • ಡೀಸಲ್ ಟೆಕ್ನಿಷಿಯನ್-4
• ಮೆಕ್ಯಾನಿಕ್ ಹೆಲ್ಪರ್ಸ್-4

ಹೊಸಬರಿಗೂ ಆದ್ಯತೆಯಿದೆ. ಅಭ್ಯರ್ಥಿಗಳು ದಾಖಲಾತಿಯೊಂದಿಗೆ ನೇರವಾಗಿ ಸಂಪರ್ಕಿಸಿ:

ಗಣೇಶ ಮೋಟಾರ್ ಅಧಿಕೃತ ಮಾರಾಟಗಾರರು

ಶೃತಿ ಮೋಟಾರ್ಸ್ ಕಾರ್ ಶೋ ರೂಂ ಪಕ್ಕ, ಶೆಲ್ ಪೆಟ್ರೋಲ್ ಬಂಕ್ ಎದುರು ರಸ್ತೆ, ಪಿ.ಬಿ. ರಸ್ತೆ, ದಾವಣಗೆರೆ-6. 84949 43963


## ಗ್ರಾಮ ಪಂಚಾಯಿತಿ ಕಾರ್ಯಾಲಯ, ಕುಂದೂರು

**ತಾಲ್ಲೂಕು: ಹೊನ್ನಾಳಿ ಜಿಲ್ಲೆ: ದಾವಣಗೆರೆ**

ಗ್ರಾ ಪಂ ಟೆಂಡರ್ 01/2022-23 ದಿನಾಂಕ 20-02-2023

### ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕು ಕುಂದೂರು ಗ್ರಾಮ ಪಂಚಾಯಿತಿಯ 2022-23 ನೇ ಸಾಲಿನಲ್ಲಿ ಅಮೃತ ಗ್ರಾಮ ಪಂಚಾಯಿತಿ ಬಿಡುಗಡೆಯಾದ ಪ್ರೋತ್ಸಾಹ ಮೊತ್ತದ ಕ್ರಿಯಾ ಯೋಜನೆಯು ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆಗೊಂಡಿರುವ ಈ ಕೆಳಕಂಡ ಸಾಮಗ್ರಿ/ಪರಿಕರಗಳ ಖರೀದಿಯ ಅನುಷ್ಠಾನಕ್ಕಾಗಿ ನೋಂದಾಯಿತ ಅರ್ಹ ಸರಬರಾಜುದಾರರಿಂದ ಕೆಟಿಟಿಪಿ ನಿಯಮ 1999 ಮತ್ತು ನಿಯಮಗಳು 2000 ರಂತೆ ಟೆಂಡರ್ ಕರೆಯಲಾಗಿದ್ದು, ಸರಬರಾಜುದಾರರು ಗ್ರಾಮ ಪಂಚಾಯಿತಿಯ ಕಛೇರಿಯ ಸಮಯದಲ್ಲಿ ಅರ್ಜಿ ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯಿತಿಯನ್ನು ಸಂಪರ್ಕಿಸುವುದು.

- ಕುಂದೂರು ಗ್ರಾಮದ ಅಂಗನವಾಡಿ ಕೇಂದ್ರ-1 ಕ್ಕೆ ಆಟದ ಸಾಮಗ್ರಿಗಳ ಖರೀದಿ : ರೂ.65000/-
- ಕುಂದೂರು ಗ್ರಾಮದ ಅಂಗನವಾಡಿ ಕೇಂದ್ರ-2 ಕ್ಕೆ ಆಟದ ಸಾಮಗ್ರಿಗಳ ಖರೀದಿ : ರೂ.65000/-
- ಕುಂದೂರು ಗ್ರಾಮದ ಅಂಗನವಾಡಿ ಕೇಂದ್ರ-3 ಕ್ಕೆ ಆಟದ ಸಾಮಗ್ರಿಗಳ ಖರೀದಿ : ರೂ.65000/-
- ಕುಂದೂರು ಗ್ರಾಮದ ಅಂಗನವಾಡಿ ಕೇಂದ್ರ-4 ಕ್ಕೆ ಆಟದ ಸಾಮಗ್ರಿಗಳ ಖರೀದಿ : ರೂ.65000/-
- ಕುಂದೂರು ಗ್ರಾಮದ ಅಂಗನವಾಡಿ ಕೇಂದ್ರ-5 ಕ್ಕೆ ಆಟದ ಸಾಮಗ್ರಿಗಳ ಖರೀದಿ : ರೂ.65000/-
- ಕುಂದೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆಟದ ಮೈದಾನಗಳಿಗೆ ಫ್ಲಡ್ ಲೈಟ್ ಖರೀದಿ : 350000/-
- ಕುಂದೂರು ಗ್ರಾಮದ ಸರ್ಕಾರಿ ಪ್ರೌಢ ಶಾಲೆಗೆ ವಿಜ್ಞಾನ ಪ್ರಯೋಗಾಲಯದ ಪರಿಕರಗಳ ಖರೀದಿ: 125000/-
- ಕುಂದೂರು ಗ್ರಾಮದ ಗ್ರಂಥಾಲಯಕ್ಕೆ ಪುಸ್ತಕಗಳ ಖರೀದಿ : 150000/-
- ಗ್ರಂಥಾಲಯಕ್ಕೆ ಪೀಠೋಪಕರಣಗಳ ಖರೀದಿ : 100000/-
- ಗ್ರಾಮಕ್ಕೆ ಸೋಲಾರ್ ಬೀದಿ ದೀಪಗಳ ಅಳವಡಿಕೆ : 800000/-
- ಘನ ತ್ಯಾಜ್ಯ ಘಟಕದ ನಿರ್ವಹಣೆಗಾಗಿ ಕಸದ ಬುಟ್ಟಿ ಖರೀದಿ :50000/-
- ಗ್ರಾಮ ಪಂಚಾಯಿತಿಗೆ ಟಿವಿ ಪ್ರೊಜೆಕ್ಟರ್ ಖರೀದಿ : 100000/-

**ಅ) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 27-02-2023 ಸಾಯಂಕಾಲ 4:00 ಗಂಟೆಗೆ**

**ಆ) ಟೆಂಡರ್ ತೆರೆಯುವ ಕೊನೆಯ ದಿನಾಂಕ 28-02-2023 ರಂದು ಬೆಳಿಗ್ಗೆ 11:30 ಗಂಟೆಗೆ**

## ಸಾರ್ವಜನಿಕ ಪ್ರಕಟಣೆ

**ಲೇಟ್ ಶ್ರೀಮತಿ ಜಯಮ್ಮ ಕೋಂ ಮಾರ್ತಾಂಡಪ್ಪ ಇವರ ವಾರಸುದಾರರಾದ ಬಿ.ಎಸ್ ಮಾರ್ತಾಂಡಪ್ಪ ಲೇಟ್ ಮಾರ್ತಾಂಡಪ್ಪ ಇವರ ವಾರಸುದಾರರಾದ 1) ಬಿ.ಎಂ. ದೇವೇಂದ್ರಪ್ಪ ಬಿನ್ ಲೇಟ್ ಮಾರ್ತಂಡಪ್ಪ, ಸಂತೆಬೆನ್ನೂರು ವಾಸ, 2) ಬಿ.ಎಂ. ಸುರೇಶ ಕುಮಾರ್ ಬಿನ್ ಲೇಟ್ ಮಾರ್ತಂಡಪ್ಪ, ತರೀಕೆರೆ, 3) ರಾಜಪ್ಪ ಬಿನ್ ಎಳುಕುರಿ ಕೃಷ್ಣಪ್ಪ ಮತ್ತು 4) ಪುರೋಷೋತ್ತಮ್ ಬಿನ್ ರಾಜಪ್ಪ ಸಂತೆಬೆನ್ನೂರು** ವಾಸಿಯಾದ ನಾವುಗಳು ಕೊಟ್ಟ ಸಾರ್ವಜನಿಕ ಪ್ರಕಟಣೆ ಏನೆಂದರೆ,

ಈ ಕೆಳಕಂಡ ಷೆಡ್ಯೂಲ್‌ನಲ್ಲಿ ತೋರಿಸಿರುವ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಮೇಲ್ಕಂಡ ನಾವುಗಳು ಮೃತ ಯಲ್ಲಮ್ಮ ಕೋಂ ಮೃತ ನಾಗಪ್ಪ ಇವರ ವಾರಸುದಾರರಾದ ಶ್ರೀಮತಿ ರತ್ನಮ್ಮ ಕೋಂ ರಾಮಣ್ಣ, ಬಸವರಾಜಪ್ಪ ಬಿನ್ ಲೇಟ್ ನಾಗಪ್ಪ, ಎಲ್ಲರು ಸತ್ಯನಾರಾಯಣ ಕ್ಯಾಂಪ್, ಕುಂದುವಾಡ ಶ್ರೀಮತಿ ಸರೋಜಮ್ಮ ಕೋಂ ಲೇಟ್ ಚಂದ್ರಪ್ಪ, ಬಳ್ಳೇಶ್ವರ ಗ್ರಾಮ, ಹೊನ್ನಾಳಿ ತಾಲ್ಲೂಕು, ಶ್ರೀಮತಿ ಕಮಲಮ್ಮ ಕೋಂ ಶೇಖರಪ್ಪ, ಕೆ.ಹೆಚ್.ಬಿ ಲೇಔಟ್, ದಾವಣಗೆರೆ ಇವರ ವಿರುದ್ಧ ನಮ್ಮ ಹಿಸ್ಸೆ ಮತ್ತು ಪ್ರತ್ಯೇಕ ಸ್ವಾಧೀನಕ್ಕಾಗಿ ಗೌರವಾನ್ವಿತ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ, ಓ.ಎಸ್ ನಂ:126/2014 ರಲ್ಲಿ ದಾವೆ ಸಲ್ಲಿಸಿದ್ದು, ಈ ದಾವೆಯಲ್ಲಿ ಮಾನ್ಯ ನ್ಯಾಯಾಲಯವು -ಕೆಳಕಂಡ ಷೆಡ್ಯೂಲ್ ಆಸ್ತಿಗಳಲ್ಲಿ ಮೃತ ನಾಗಪ್ಪ ಇವರ ಹಿಸ್ಸೆಯನ್ನು 1/5 ಭಾಗದಲ್ಲಿ 1/2 ಭಾಗ ಕೊಡಲು ಆದೇಶವನ್ನು ಮಾಡಿರುತ್ತದೆ. ಈ ಆದೇಶದ ವಿರುದ್ಧ ಎದುರುದಾರರು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದು, ಅಪೀಲು ವಜಾ ಆಗಿರುತ್ತದೆ. ಅದರಂತೆ ನಾವುಗಳು ಅಂತಿಮ ಡಿಕ್ರಿಗಾಗಿ ಎಫ್.ಡಿ.ಪಿ8/2016 ರ ಅರ್ಜಿಯನ್ನು ಸಲ್ಲಿಸಿರುತ್ತೇವೆ. ಸದರಿ ಅರ್ಜಿಯಲ್ಲಿ ಭೂ ಮಾಪಕರು ಅಳತೆಯನ್ನು ಮಾಡಿ ನಮ್ಮಗಳ ಹಿಸ್ಸೆಯ ಭಾಗವನ್ನು ಗುರುತಿಸಿರುತ್ತಾರೆ ಹಾಗೂ ಸದರಿ ಮೇಲ್ಕಂಡ ಪ್ರಕರಣವು ದಾವಣಗೆರೆ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಆರ್.ಎ.16/2022 ರ ಪ್ರಕರಣವು ಚಾಲ್ತಿಯಲ್ಲಿ ಇರುತ್ತದೆ. ಹೀಗಿರುವಲ್ಲಿ ಪ್ರಕರಣದ ಮೇಲ್ಕಂಡ ಪ್ರತಿವಾದಿಗಳು ಷೆಡ್ಯೂಲ್ ಆಸ್ತಿಗಳಿಗೆ ಸಂಬಂಧಿಸಿದಂತೆ ಎಲ್ಲ ವಿಷಯಗಳನ್ನು ಮರೆಮಾಚಿ ಷೆಡ್ಯೂಲ್ ಆಸ್ತಿಗಳನ್ನು ಪರಭಾರೆ ಮಾಡುವ ತರಾತುರಿಯಲ್ಲಿರುತ್ತಾರೆ. ಮೇಲ್ಕಂಡವರಿಗೆ ಷೆಡ್ಯೂಲ್ ಆಸ್ತಿಗಳನ್ನು ಮಾರಾಟ ಮಾಡುವ ಯಾವ ಹಕ್ಕು ಇರುವುದಿಲ್ಲ.

ಆದುದರಿಂದ ಸಾರ್ವಜನಿಕವಾಗಿ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಕಂಡ ಷೆಡ್ಯೂಲ್‌ನಲ್ಲಿ ತೋರಿಸಿರುವ ಆಸ್ತಿಗಳನ್ನು ಮೇಲ್ಕಂಡವರಿಂದ ಯಾವುದೇ ರೀತಿ ವ್ಯವಹಾರ ಪರಭಾರೆ ಮಾಡಬಾರದೆಂದು, ಒಂದು ವೇಳೆ ಮಾಡಿದಲ್ಲಿ ಅದು ನಮ್ಮಗಳ ಹಿಸ್ಸೆಗೆ ಮತ್ತು ಹಕ್ಕಿಗೆ ಯಾವುದೇ ಚ್ಯುತಿಯಾಗುವುದಿಲ್ಲವೆಂದು ಈ ಮೂಲಕ ತಿಳಿಸುತ್ತೇವೆ.

**ಷೆಡ್ಯೂಲ್**

1) ದಾವಣಗೆರೆ ತಾಲ್ಲೂಕು ಕುಂದವಾಡ ಗ್ರಾಮದ ರಿ.ಸ.ನಂ:129 ರಲ್ಲಿನ 1-ಎಕರೆ 32-ಗುಂಟೆ ಜಮೀನು.
2) ದಾವಣಗೆರೆ ತಾಲ್ಲೂಕು ಕುಂದವಾಡ ಗ್ರಾಮದ ರಿ.ಸ.ನಂ:156 ರಲ್ಲಿನ 37 ಗುಂಟೆ ಜಮೀನು.
3) ದಾವಣಗೆರೆ ತಾಲ್ಲೂಕು ಕುಂದವಾಡ ಗ್ರಾಮದ ರಿ.ಸ.ನಂ:89 ರಲ್ಲಿನ 3 ಎಕರೆ 18 ಗುಂಟೆ ಜಮೀನು.
4) ದಾವಣಗೆರೆ ತಾಲ್ಲೂಕು ಕುಂದವಾಡ ಗ್ರಾಮದ ರಿ.ಸ.ನಂ:89ರಲ್ಲಿನ 3-ಎಕರೆ ಜಮೀನು.
5) ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ರಿ.ಸ.ನಂ:32/1ಎ ರಲ್ಲಿನ 3-ಎಕರೆ 06 ಗುಂಟೆ ಜಮೀನು.
6) ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ರಿ.ಸ.ನಂ:32/1ಬಿಪಿ ರಲ್ಲಿನ 3-ಎಕರೆ 08 ಗುಂಟೆ ಜಮೀನು.
7) ದಾವಣಗೆರೆ ತಾಲ್ಲೂಕು ಕುಂದವಾಡ ಗ್ರಾಮದ ಆಸ್ತಿ ನಂ:617, ಇರುವ ವಾಸದ ಮನೆ.

**ಕಕ್ಷಿದಾರರು**
**ಸುರೇಶ್ ಕುಮಾರ್ ಬಿ.ಎಂ**
**81058 69423**

**ಸಂಪತ್ ಕುಮಾರ್.ಜೆ.**
**ಚೇತನ ಕುಮಾರ್ ಬಿ.ಜಿ**
**ವಕೀಲರು**
**94492 70211**

# ದೇವರಬೆಳಕೆರೆ ಸ.ಶಾಲೆಯಲ್ಲಿ ಗಣಿತ - ಕಲಿಕಾ ಆಂದೋಲನಾ - ಮೌಲ್ಯಾಂಕನ ಕಾರ್ಯಕ್ರಮ



ದಾವಣಗೆರೆ, ಫೆ.21- ತಾಲ್ಲೂಕಿನ ದೇವರಬೆಳಕೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶಿಕ್ಷಣ ಫೌಂಡೇಷನ್ ಅಡಿಯಲ್ಲಿ ದೇವರಬೆಳಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲೆಗಳಲ್ಲಿ ವ್ಯಾಸಾಂಗ ಮಾಡುತ್ತಿರುವ 4 ರಿಂದ 6ನೇ ವರ್ಗದ ವಿದ್ಯಾರ್ಥಿಗಳಿಗೆ ಗಣಿತ ಮೌಲ್ಯಾಂಕನ ಕಾರ್ಯಕ್ರಮವು ಇಂದು ನಡೆಯಿತು.

ಸಿಆರ್‌ಪಿ ಹೆಚ್.ಕೆ.ಸತೀಶ್ ಮಾತನಾಡಿ, ಮಕ್ಕಳು ಬೌದ್ಧಿಕ ಮಟ್ಟ ಹೆಚ್ಚಿಸಿಕೊಳ್ಳಬೇಕು. ಗಣಿತ ಕಲಿಕೆಗ ಒತ್ತು ನೀಡಲು ರಾಜ್ಯ ಹಂತದಲ್ಲಿ ಶಿಕ್ಷಣ ಫೌಂಡೇಷನನ್ನು ಇಲಾಖೆಯೊಂದಿಗೆ ಕೈ ಜೋಡಿಸಿದೆ ಎಂದರು.

ಮುಖ್ಯಶಿಕ್ಷಕ ಆರ್.ಆರ್.ಮಠ ಮಾತನಾಡಿ, ಕಬ್ಬಿಣ ಕಡಲೆ ಎಂದು ಗಣಿತ ಕಲಿಕೆಯನ್ನು ಯಾರೂ ಭಾವಿಸಬಾರದು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇದರ ಕಲಿಕೆ ಅತ್ಯಗತ್ಯ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಗ್ರಾ.ಪಂ. ಅಧ್ಯಕ್ಷ ಕೆ.ಹೆಚ್.ಜಗದೀಶ್ ಕಾರ್ಯಕ್ರಮ ಉದ್ಘಾಟಿಸಿದರು. ಅತಿಥಿಗಳಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬೀರೇಶ್, ಸದಸ್ಯರಾದ ಕರಿಬಸಪ್ಪ, ಐ.ಎಸ್.ಮಲ್ಲಿಕಾರ್ಜುನ್, ಉಪಾಧ್ಯಕ್ಷರಾದ ರತ್ನಮ್ಮ ಚಂದ್ರಶೇಖರ್, ಮಹೇಶ್ವರಯ್ಯ, ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀಮತಿ ಜೆ.ಎಂ.ಲತಾ ಕೊಟ್ರೇಶ್ ಅವರುಗಳು ಉಪಸ್ಥಿತರಿದ್ದರು.

ಹಿರಿಯ ಶಿಕ್ಷಕ ಟಿ.ಎಸ್.ಕುಮಾರಸ್ವಾಮಿ ಸ್ವಾಗತಿಸಿದರು. ಬೂದಿಹಾಳು ಶಾಲಾ ಮುಖ್ಯಸ್ಥ ಕೆ. ಹೆಚ್.ಹನುಮಂತಪ್ಪ ವಂದಿಸಿದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಗಣೇಶ ದೇವಸ್ಥಾನ, ಹದಡಿ ರಸ್ತೆ, ಇಮಾನ್ ಮಟ್ಟಿ, ವಿದ್ಯಾನಗರ, ವಾಣಿ ರೈಸ್‌ಮಿಲ್ ಹಿಂಭಾಗ, ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು, ಸರಸ್ವತಿ ಬಡಾವಣೆ ಎ ಮತ್ತು ಬಿ ಬ್ಲಾಕ್, ಜಯನಗರ ಎ, ಬಿ, ಸಿ ಬ್ಲಾಕ್ ಭೂಮಿಕ ನಗರ, ಜೆಎನ್ ಕಾನ್ವೆಂಟ್ ಕೆಎಸ್‌ಎಸ್ ಕಾಲೇಜ್. ಎಸ್. ಎಸ್. ಲೇಔಟ್ ಎ ಬ್ಲಾಕ್, ಕುವೆಂಪು ನಗರ, ಎಂಸಿಸಿ ಬಿ ಬ್ಲಾಕ್, ಸಿದ್ದವೀರಪ್ಪ ಬಡಾವಣೆ, ಶಾಮನೂರು ರೋಡ್, ಬಿಐಇಟಿ ರೋಡ್, ಗ್ಲಾಸ್‌ಹೌಸ್, ಬಾಪೂಜಿ ಸಮುದಾಯ ಭವನ, ಅಂಗವಿಕಲ ಶಾಲೆ, ಲಕ್ಷ್ಮಿ ಫ್ಲೋರ್ ಮಿಲ್, ಎಸ್.ಎನ್ ಲೇಔಟ್, ಜಿ.ಎಚ್ ಪಾರ್ಕ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಹೊದಿಗೆರೆ ಷಹಜಿ ಸಮಾಧಿ ಅಭಿವೃದ್ಧಿಗೆ ಹಣ



ದಾವಣಗೆರೆ, ಫೆ.21- ರಾಜ್ಯ ಸರ್ಕಾರವು ಚನ್ನಗಿರಿ ತಾಲ್ಲೂಕು ಹೊದಿಗೆರೆ ಗ್ರಾಮದ ಷಹಜಿ ಸಮಾಧಿ ಅಭಿವೃದ್ಧಿಗೆ ನೀಡಿರುವ ಹಣವನ್ನು ಮರಳಿ ಪಡೆದು ಕೆಳದಿಯ ಚೆನ್ನಮ್ಮ ಕಟ್ಟಿಸಿರುವ ಚನ್ನಗಿರಿ ಕೋಟೆ ಅಭಿವೃದ್ಧಿಗೆ ನೀಡುವಂತೆ ಕರ್ನಾಟಕ ನವ ನಿರ್ಮಾಣ ಸೇನೆ ಆಗ್ರಹಿಸಿದೆ.

ಈ ಸಂಬಂಧ ಸೇನೆಯ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದ್ದಾರೆ.

ಕನ್ನಡಿಗರ ಕೆಳದಿ ಸಾಮ್ರಾಜ್ಯದ ಮೇಲೆ ದಾಳಿ ಮಾಡಲು ಬಂದು ಚನ್ನಗಿರಿಯ ಕಾಡಿನಲ್ಲಿ ಕುದುರೆ ಮೇಲಿಂದ ಬಿದ್ದು ಸಾವನ್ನಪ್ಪಿರುವ ಷಹಜಿ ಸಮಾಧಿ ಅಭಿವೃದ್ಧಿಗೆ ಸರ್ಕಾರ ಬಜೆಟ್‌ನಲ್ಲಿ 5 ಕೋಟಿ ಹಣ ನೀಡಿರುವ ಕ್ರಮವನ್ನು ಸೇನೆ ತೀವ್ರವಾಗಿ ಖಂಡಿಸುತ್ತದೆ.

ಕನ್ನಡದ ರಾಜ ಮನೆತನಗಳನ್ನು ಗೌರವಿಸುವುದನ್ನು ಬಿಟ್ಟು, ಕನ್ನಡದ ರಾಜಮನೆತನಗಳ ಮೇಲೆ ದಾಳಿ ಮಾಡಿದವರನ್ನು ಮತ ಬ್ಯಾಂಕ್‌ಗಾಗಿ ವೈಭವೀಕರಿಸುತ್ತಿರುವುದು ನಾಚಿಕೆಗೇಡಿನ ಸಂಗತಿ. ಮರಾಠ ಪೇಶ್ವೆಗಳು ಈ

### ಕರ್ನಾಟಕ ನವ ನಿರ್ಮಾಣ ಸೇನೆ ವಿರೋಧ

ನಾಡಿನ ಅನೇಕ ರಾಜಮನೆತನಗಳನ್ನು ಲೂಟಿ ಮಾಡಿದ್ದಾರೆ. ಅವರನ್ನೇ ಹೀರೋಗಳಂತೆ ಬಿಂಬಿಸಲು ಹೊರಟಿರುವುದು ದುರಂತ.

ಕರ್ನಾಟಕಕ್ಕೆ ಷಹಜಿಯ ಕೊಡುಗೆ ಶೂನ್ಯ. ಕೆಳದಿ ಸಾಮ್ರಾಜ್ಯದ ಮೇಲೆ ದಾಳಿ ಮಾಡಲು ಬಂದು ಸಾವನ್ನಪ್ಪಿದ ಷಹಾಜಿಯ ಶವವನ್ನು ಅಲ್ಲಿಯೇ ಬಿಟ್ಟು ಓಡಿ ಹೋದ ಪೇಶ್ವೆ ಸೈನಿಕರ ಹೇಡಿತನ ಇತಿಹಾಸದ ಪುಟಗಳಿಂದ ಬಚ್ಚಿಡಲು ಸಾಧ್ಯವಿಲ್ಲ. ಅನಾಥವಾಗಿ ಬಿದ್ದಿದ್ದ ಷಹಜಿ ಶವವನ್ನು ಸಂಸ್ಕಾರ ಮಾಡಿ ಮಾನವೀಯತೆ ಮೆರೆದದ್ದು ಕೆಳದಿಯ ಅರಸರು ಎಂಬ ಇತಿಹಾಸವಾದರೂ ಸರ್ಕಾರಕ್ಕೆ ಗೊತ್ತಿದೆಯಾ ?

ಕೆಳದಿ ಚೆನ್ನಮ್ಮ, ಶಿವಪ್ಪ ನಾಯಕರ ಮೇಲೆ ಇಲ್ಲದ ಶ್ರದ್ಧೆ, ಗೌರವ ಷಹಜಿಗೆ ಏಕೆ ? ಸರ್ಕಾರಕ್ಕೆ ಗೊತ್ತಿಲ್ಲ ಎನ್ನುವುದಾದರೆ ದಾಖಲೆ ಸಮೇತ ನೀಡುತ್ತೇವೆ. ನಮ್ಮ ರಾಜ-ಮ ಹಾ ರಾ ಜ ರು ಗ ಳ ನ್ನು ಗೌರವಿಸುವುದನ್ನು ಬಿಟ್ಟು, ಒಣ ಶೋಕಿಗಳಿಗೆ ಕನ್ನಡಿಗರ ತೆರಿಗೆ ಹಣ ಬಳಸುವುದು ಬೇಡ. ಹಾಗಾಗಿ ಈ ಕೂಡಲೇ ಷಹಜಿ ಸಮಾಧಿ ಸ್ಥಳ ಅಭಿವೃದ್ಧಿಗೆ ನೀಡಿರುವ ಹಣವನ್ನು ಮರಳಿ ಪಡೆಯಬೇಕು ಎಂದು ನವ ನಿರ್ಮಾಣ ಸೇನೆ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಸೇನೆ ಜಿಲ್ಲಾಧ್ಯಕ್ಷ ಕೆ.ಎನ್. ವೆಂಕಟೇಶ್, ಉಪಾಧ್ಯಕ್ಷ ಶೇರ್ ಅಲಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ್, ಸಂಚಾಲಕ ಅಶ್ಫಾಕ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ಜಾವೀದ್, ನಗರ ಅಧ್ಯಕ್ಷ ನಾರಾಯಣ್, ಸಂಚಾಲಕ ಆಂಜನೇಯ, ಪ್ರಧಾನ ಕಾರ್ಯದರ್ಶಿ ನವೀನ್ ಮತ್ತಿತರರು ಹಾಜರಿದ್ದರು.

# ಮಕ್ಕಳನ್ನು ವಿಶ್ವದ ಸಮಗ್ರ ನಾಯಕರನ್ನಾಗಿ ರೂಪಿಸಬೇಕಿದೆ

ದಾವಣಗೆರೆ, ಫೆ.21 - ಮಕ್ಕಳಿಗೆ ಸಾಮರ್ಥ್ಯ ತರಬೇತಿಯನ್ನು ನೀಡುವುದು ಇಂದಿನ ಅವಶ್ಯಕವಾಗಿದೆ. ಮಕ್ಕಳಲ್ಲಿ ಜಾತಿ, ಧರ್ಮ, ವರ್ಗ ಹಾಗೂ ರಾಷ್ಟ್ರೀಯತೆಯ ಭೇದ ಭಾವಗಳನ್ನು ನಿರ್ಮೂಲನೆ ಮಾಡಿ ಅವರಲ್ಲಿ ಸಮಗ್ರ ನಾಯಕತ್ವದ ಗುಣಗಳನ್ನು ಬೆಳೆಸಬೇಕಾಗಿದೆ ಎಂದು ಹಿರಿಯ ನ್ಯಾಯವಾದಿ ಎಲ್.ಹೆಚ್. ಅರುಣ್‌ಕುಮಾರ್ ಕರೆ ನೀಡಿದರು.



> ಇಂದಿನ 21ನೇ ಶತಮಾನದಲ್ಲೂ ಮಹಿಳೆಯರು ಮತ್ತು ಮಕ್ಕಳ ಮೇಲೆ ಕಾನೂನುಗಳು ಇದ್ದರೂ ಸಹ ಅವುಗಳ ಅರಿವಿನ ಕೊರತೆಯಿಂದ ನಿರಂತರವಾಗಿ ದೌರ್ಜನ್ಯಗಳು ನಡೆಯುತ್ತಿರುವುದು ವಿಷಾದನೀಯ.
> -ಎಲ್.ಹೆಚ್. ಅರುಣ್ ಕುಮಾರ್, ಹಿರಿಯ ನ್ಯಾಯವಾದಿ

ಸ್ಥಳೀಯ ಆ್ಯಕ್ಷನ್ ಇನಿಷಿಯೇಟಿವ್ ಫಾರ್ ಡೆವಲಪ್‌ಮೆಂಟ್ ಹಾಗೂ ಬೆಂಗಳೂರಿನ ಬಾಲ್ಯ ಟ್ರಸ್ಟ್ ಹಾಗೂ ಟಿಡಿಹೆಚ್-ಜಿ ಸಹಕಾರದೊಂದಿಗೆ ಭಾನುವಾರ ನಗರದ ಎಸ್‌ಪಿ ಆಫೀಸ್ ಮುಂಭಾಗ ಇರುವ ಅಡೋರಸ್ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಮಕ್ಕಳ ಹಕ್ಕುಗಳು ಮತ್ತು ನಾಯಕತ್ವ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಹಕ್ಕುಗಳನ್ನು ಕಾನೂನಿನ ಅಡಿಯಲ್ಲಿ ಸಿದ್ದಪಡಿಸಲಾಗಿದೆ. ಆ ಮೂಲಕ ಮಕ್ಕಳನ್ನು ಸಮಾಜದ ಸ್ವಾಯತ್ತ ವ್ಯಕ್ತಿಗಳನ್ನಾಗಿ ರೂಪಿಸುವುದು. ಅಲ್ಲದೇ ಇತರರ ಮೇಲಿನ ಅವಲಂಬನೆಯಿಂದಾಗಿ ಮಕ್ಕಳ ಮೇಲೆ ನಡೆಯುವ ಹಾನಿಗಳಿಂದ ರಕ್ಷಣೆ ಪಡೆಯಲು ಮಕ್ಕಳ ಹಕ್ಕುಗಳನ್ನು ರಚಿಸಲಾಗಿದೆ. ಅವುಗಳನ್ನು ಸೂಕ್ತ ರೀತಿ ಜಾರಿಗೆ ತಂದು ಮಕ್ಕಳನ್ನು ಸಬಲೀಕರಣದತ್ತ ಕೊಂಡೊಯ್ಯಬೇಕಿದೆ. ಈ ನಿಟ್ಟಿನಲ್ಲಿ ಕೈಗೊಂಡಿರುವ ನಾಯಕತ್ವ ತರಬೇತಿ ಶಿಬಿರ ಅತ್ಯಂತ ಸೂಕ್ತವಾಗಿದೆ ಎಂದು ಹೇಳಿದರು.

ಮಹಿಳೆಯರು ಮತ್ತು ಮಕ್ಕಳ ಬಗ್ಗೆ ಇರುವ ಕಾನೂನುಗಳ ಬಗ್ಗೆ ಅರಿವು ಮೂಡಿಸಿ, ಜಾಗೃತಿ ಮೂಡಿಸಬೇಕಾಗಿದೆ. ಅಲ್ಲದೇ ಅನ್ಯಾಯಗಳ ವಿರುದ್ದ ನ್ಯಾಯ ದೊರಕಿಸಿಕೊಳ್ಳಲು ಶಕ್ತರನ್ನಾಗಿ ಮಾಡಬೇಕಾಗಿದೆ. ಇದಲ್ಲದೇ ಹುಟ್ಟುವ ಮಕ್ಕಳು ವಿಶ್ವಮಾನವರಾಗಿದ್ದ ಅವರನ್ನು ವಿಶ್ವದ ಸಮಗ್ರ ನಾಯಕರನ್ನಾಗಿ ರೂಪಿಸಬೇಕಾಗಿದೆ ಎಂದು ಹೇಳಿದರು.

ಎಐಡಿ ಸಂಸ್ಥೆಯ ಕಾರ್ಯದರ್ಶಿ ಡಿ. ಎಸ್. ಬಾಬಣ್ಣ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಡಾನ್‌ಬಾಸ್ಕೋದ ಸಂಪನ್ಮೂಲ ವ್ಯಕ್ತಿಗಳಾದ ಬಿ. ಮಂಜಪ್ಪ ಹಾಗೂ ಆರ್. ದುರುಗಪ್ಪ ಆಗಮಿಸಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರಿನ ಬಾಲ್ಯ ಟ್ರಸ್ಟ್‌ನ ಅನಂತ್ ಆಗಮಿಸಿದ್ದರು.

# ಸಚಿವ ಅಶ್ವತ್ಥ ನಾರಾಯಣರ ವಜಾಕ್ಕೆ ಕೊಟ್ಟೂರು ಬ್ಲಾಕ್ ಕಾಂಗ್ರೆಸ್ ಒತ್ತಾಯ



ಕೊಟ್ಟೂರು, ಫೆ.21- ಮಾಜಿ ಸಿಎಂ ಸಿದ್ದರಾಮಯ್ಯನವರ ವಿರುದ್ಧ ಅವಹೇಳನಕಾರಿ ಮಾತನಾಡಿರುವ ಸಚಿವ ಡಾ.ಸಿ.ಎನ್.ಅಶ್ವತ್ಥ್‌ನಾರಾಯಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಇಲ್ಲಿನ ಬ್ಲಾಕ್ ಕಾಂಗ್ರೆಸ್ ಒತ್ತಾಯಿಸಿದೆ.

ಒಬ್ಬ ಅಪ್ರತಿಮ ಹೋರಾಟಗಾರ, ಅತ್ಯಂತ ಹಿರಿಯ ಆಡಳಿತಗಾರರ ಜನಪ್ರಿಯತೆ ಕಂಡು, ಬರುವಂತಹ ಚುನಾವಣೆಯಲ್ಲಿ ತಮ್ಮ ಬಿಜೆಪಿ ಪಕ್ಷಕ್ಕೆ ಸೋಲು ಉಂಟಾಗುವ ಭೀತಿಯಲ್ಲಿ ಇರುವ ಬಿಜೆಪಿ ನಾಯಕರುಗಳು ಪ್ರತಿ ದಿನ ಒಂದಲ್ಲಾ ಒಂದು ವೇದಿಕೆಯಲ್ಲಿ ಸಿದ್ದರಾಮಯ್ಯ ನವರನ್ನು ಕಟು ಶಬ್ಧಗಳಲ್ಲಿ ಟೀಕಿಸುತ್ತಿದ್ದು, ಇದರ ಮುಂದುವರೆದ ಭಾಗವಾಗಿ ಸಚಿವ ಡಾ.ಸಿ.ಎನ್. ಅಶ್ವತ್‌ನಾರಾಯಣ ಅತ್ಯಂತ ಕೀಳು ಮನಸ್ಥಿತಿಯನ್ನು ಪ್ರದರ್ಶಿಸುತ್ತಾ ಸಿದ್ದರಾಮಯ್ಯ ನವರನ್ನು ಹೊಡೆದು ಹಾಕಿ ಎನ್ನುವ ಪದಬಳಕೆ ಮಾಡಿ ರಾಜ್ಯದಲ್ಲಿನ ಕೋಟ್ಯಾಂತರ ಅಭಿಮಾನಿಗಳಿಗೆ ನೋವು ಉಂಟು ಮಾಡಿದ್ದಾರೆ. ನಾಡಿನ ಒಬ್ಬ ಹಿರಿಯ ಮುತ್ಸದ್ದಿಯನ್ನು ಟೀಕಿಸುವ ಭರದಲ್ಲಿ ತಮ್ಮ ವಿವೇಚನೆಯನ್ನು ಮರೆತು ಅನಾಗರಿಕರಂತೆ ವರ್ತಿಸಿರುವ ಸಚಿವರ ನಡೆಯಿಂದ ಇಡೀ ರಾಜ್ಯವೇ ತಲೆ ತಗ್ಗಿಸುವಂತಾಗಿರುತ್ತದೆ. ಆದ್ದರಿಂದ ಮುಖ್ಯಮಂತ್ರಿಗಳು ಕೂಡಲೇ ಸಚಿವ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ ಸಿದ್ದರಾಮಯ್ಯನವರ ಪ್ರಕರಣಕ್ಕೆ ನ್ಯಾಯ ಒದಗಿಸುವಂತೆ ಕಾಂಗ್ರೆಸ್ ಸಮಿತಿ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಐ. ಎಂ. ದಾರುಕೇಶ್. ಹರಾಳು ನಂಜಪ್ಪ, ಅಡಕಿ ಮಂಜುನಾಥ್, ಗೂಳಿ ಮಲ್ಲಿಕಾರ್ಜುನ್, ಚಿನ್ನನಹಳ್ಳಿ ಮುಗಪ್ಪ, ಕನ್ನಹಳ್ಳಿ ರಾಜಣ್ಣ, ಅಚಮನಿ ಮಲ್ಲಿಕಾರ್ಜುನ್, ಪೂಜಾರ್ ನಾಗಪ್ಪ, ಅಶೋಕ್ ಇಂಜಿನಿಯರ್, ಶಿವಕುಮಾರ್ ಗೌಡ, ಮೊರೂರು ಕೊಟ್ರೇಶ್, ಉಮಾಪತಿ, ಎಲ್‌ಐಸಿ ಮೂಗಣ್ಣ, ಮಾನಸ ರಾಜಣ್ಣ ಇನ್ನೂ ಪ್ರಮುಖ ಮುಖಂಡರು ಇದ್ದರು.

## ನಗರದಲ್ಲಿ ಇಂದಿನಿಂದ ಜಿಲ್ಲಾ ಮಟ್ಟದ ಶಿಕ್ಷಕರ ಸಹಾಯಕ ಯೋಗ, ನೈತಿಕ ಶಿಕ್ಷಣ ತರಬೇತಿ

ಭಾರತ ಸೇವಾದಳ, ಜಿಲ್ಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇವರ ಸಹಯೋಗದಲ್ಲಿ ಇಂದಿನಿಂದ ಇದೇ ದಿನಾಂಕ 28 ರವರೆಗೆ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಭಾರತ ಸೇವಾದಳ ಭವನದಲ್ಲಿ ಜಿಲ್ಲಾಮಟ್ಟದ ಶಿಕ್ಷಕರ ಸಹಾಯಕ ಯೋಗ, ನೈತಿಕ ಶಿಕ್ಷಣ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ.

ಇಂದು ಮಧ್ಯಾಹ್ನ 2 ಗಂಟೆಗೆ ಶಿಬಿರದ ಉದ್ಘಾಟನಾ ಸಮಾರಂಭ ನಡೆಯಲಿದೆ.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್ ಕಾರ್ಯಕ್ರಮ ಉದ್ಘಾಟಿಸುವರು. ಭಾರತ ಸೇವಾದಳದ ಜಿಲ್ಲಾಧ್ಯಕ್ಷ ಪ್ರೊ.ಹೆಚ್. ಚನ್ನಪ್ಪ ಪಲ್ಲಾಗಟ್ಟೆ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಡಿಡಿಪಿಐ ಜಿ. ಆರ್. ತಿಪ್ಪೇಶಪ್ಪ, ಡಯಟ್ ಪ್ರಾಂಶುಪಾಲರಾದ ಗೀತಾ, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್, ಬಿಇಓಗಳಾದ ಅಂಬಣ್ಣ, ಬಿ.ಎಂ. ದಾರುಕೇಶ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸತ್ಯನಾರಾಯಣ, ಭಾರತ ಸೇವಾ ದಳ ಕೇಂದ್ರ ಸಮಿತಿ ಸದಸ್ಯ ಟಿ. ನಾಗರಾಜ್, ಭಾರತ ಸೇವಾದಳ ಜಿಲ್ಲಾ ಉಪಾಧ್ಯಕ್ಷ ಆಲೂರು ವಿಜಯಕುಮಾರ್, ಕೋಶಾಧ್ಯಕ್ಷ ಎಂ. ರುದ್ರಯ್ಯ, ಜಿಲ್ಲಾ ಸಮಿತಿ ಸದಸ್ಯರಾದ ಯು.ಹನುಮಂತಪ್ಪ, ಎಸ್.ಟಿ. ಕುಸುಮಶ್ರೇಷ್ಠಿ, ರಮಣ್ ಲಾಲ್ ಸಂಘವಿ, ಉಮಾ ವೀರಭದ್ರಪ್ಪ, ಕೆ.ಆರ್. ಸಿದ್ಧೇಶ್, ಕಾರ್ಯದರ್ಶಿ ಪರಮೇಶ್ವರಪ್ಪ, ತಾಲ್ಲೂಕು ಅಧ್ಯಕ್ಷ ಹಾಸಬಾವಿ ಕರಿಬಸಪ್ಪ, ಕೋಶಾಧ್ಯಕ್ಷ ಎಸ್.ಎನ್. ರಮೇಶ್, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಲೋಕಪ್ಪ, ಹುಸೇನ್‌ಪೀರ್ ಭಾಗವಹಿಸಲಿದ್ದಾರೆ.

## ಮಂಜುನಾಥ ಸ್ವಾಮಿ, ನರಸಿಂಹ ಸ್ವಾಮಿ ದೇವಸ್ಥಾನದ ಹುಂಡಿ ಹಣ ಎಣಿಕೆ



ಹೊನ್ನಾಳಿ, ಫೆ.21 - ದ್ವಿತೀಯ ಧರ್ಮಸ್ಥಳ ಖ್ಯಾತಿಯ, ತಾಲ್ಲೂಕಿನ ಸುಂಕದಕಟ್ಟೆ ಗ್ರಾಮದಲ್ಲಿನ ಮುಜರಾಯಿ ಇಲಾಖೆಯ 'ಎ' ಗ್ರೇಡ್ ದೇವಸ್ಥಾನ ಶ್ರೀ ಮಂಜುನಾಥ ಸ್ವಾಮಿ - ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ಹುಂಡಿ ಹಣ ಎಣಿಕೆ ಪ್ರಕ್ರಿಯೆ ಮಂಗಳವಾರ ಗ್ರಾಮಸ್ಥರು - ಅಧಿಕಾರಿಗಳ ಸಮ್ಮುಖದಲ್ಲಿ ನಡೆಯಿತು.

**ಹೊನ್ನಾಳಿ**

40,88,180=00 ರೂ.ಗಳಷ್ಟು ಹಣ, ಒಂದು ಸಾವಿರ ರೂ. ಮುಖಬೆಲೆಯ ನಿಷೇಧಿತ ಒಂದು ನೋಟು, ನಾನಾ ಬೇಡಿಕೆಗಳನ್ನೊಳಗೊಂಡ ಕೈಬರಹದ ಏಳೆಂಟು ಚೀಟಿಗಳು, ಹುಂಡಿಯಲ್ಲಿ ದೊರೆತವು. ಸಂಗ್ರಹಗೊಂಡ ಹಣವನ್ನು ಹೊನ್ನಾಳಿಯ ಕೆನರಾ ಬ್ಯಾಂಕ್‌ಗೆ ಜಮಾ ಮಾಡಲಾಯಿತು.

ಉಪ ವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಶೀಲ್ದಾರ್ ತಿರುಪತಿ ಪಾಟೀಲ್, ಉಪ ತಹಶೀಲ್ದಾರ್ ಟಿ. ಸುರೇಶ್‌ನಾಯ್ಕ, ಎಸಿ ಕಚೇರಿಯ ತಹಶೀಲ್ದಾರ್ ಸೈಯ್ಯದ್ ಖಲೀಮ್ ಉಲ್ಲಾ, ಮುಜರಾಯಿ ಇಲಾಖೆಯ ವಿಷಯ ನಿರ್ವಾಹಕರಾದ ರೇಣುಕಾ ಶಿವನಗೌಡರ್, ಶ್ರೀ ಮಂಜುನಾಥ ಸ್ವಾಮಿ - ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಎಸ್.ಕೆ. ನರಸಿಂಹಮೂರ್ತಿ, ಪ್ರಧಾನ ಅರ್ಚಕ ಎಸ್. ರಾಜುಸ್ವಾಮಿ, ಕೆನರಾ ಬ್ಯಾಂಕ್ ಉದ್ಯೋಗಿ ರಾಮಣ್ಣ ಇತರರು ಇದ್ದರು.

## ನೀಲಾನಹಳ್ಳಿಯಲ್ಲಿ 26 ರಂದು ತೇರು



ದಾವಣಗೆರೆ, ಫೆ.21- ತಾಲ್ಲೂಕಿನ ಶ್ರೀ ಕ್ಷೇತ್ರ ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿಯ ರಥೋತ್ಸವ ಹಾಗೂ ಕಾರಣಿಕೋತ್ಸವವು ಇದೇ ದಿನಾಂಕ 26 ರ ಭಾನುವಾರ ನಡೆಯಲಿದೆ.

ದಿನಾಂಕ 24 ರ ಶುಕ್ರವಾರ ರಾತ್ರಿ 9.10 ಕ್ಕೆ ಸ್ವಾಮಿಗೆ ಕಂಕಣಧಾರಣೆ, ದಿನಾಂಕ 25ರ ಶನಿವಾರ ಸಂಜೆ ದೊಡ್ಡಬಾತಿ ಶ್ರೀ ಬೀರಲಿಂಗೇಶ್ವರ ದೇವರ ಆಗಮನ, ಅಂದು ರಾತ್ರಿ ಅರಿಶಿಣ ಎಣ್ಣೆ ನಡೆಯುವುದು.

ದಿನಾಂಕ 26 ರ ಭಾನುವಾರ ಬೆಳಿಗ್ಗೆ 8.30 ಕ್ಕೆ ರಥೋತ್ಸವ, 9.30 ರಿಂದ ಮಧ್ಯಾಹ್ನ 1.30 ರವರೆಗೆ ಭಕ್ತಾದಿಗಳು ಹರಕೆ ತೀರಿಸುವರು.

ಅಂದು ಸಂಜೆ 4.30 ಕ್ಕೆ ಬೇಟೆ ಆಡುವುದು, 5.30 ಕ್ಕೆ ಮುಳ್ಳು ಗದ್ದಿಗೆ ಏರುವುದು, 6.30 ಕ್ಕೆ ಕಾರಣಿಕ ನಡೆಯುವುದು. ರಾತ್ರಿ 7.30 ಕ್ಕೆ ಭೂತ ಸೇವೆ, 8.30 ಕ್ಕೆ ಓಕಳಿ, 9.30 ಕ್ಕೆ ಗಂಗೆಪೂಜೆ ನೆರವೇರುವುದು ಎಂದು ಕನ್ವೀನರ್ ಎನ್.ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ.

## ಶಂಕರನಹಳ್ಳಿಯಲ್ಲಿ ಇಂದು ಗ್ರಾಮ ವಾಸ್ತವ್ಯ

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಹಶೀಲ್ದಾರ್ ಒಳಗೊಂಡಂತೆ, ತಾಲ್ಲೂಕು ಮಟ್ಟದ ಅಧಿಕಾರಿಗಳು ಮಾಯಕೊಂಡ ಹೋಬಳಿ ಶಂಕರನಹಳ್ಳಿಯಲ್ಲಿ ಇಂದು ಗ್ರಾಮ ವಾಸ್ತವ್ಯ ಮಾಡಲಿದ್ದಾರೆ. ಗ್ರಾಮಸ್ಥರು ತಮ್ಮಗಳ ಅಹವಾಲುಗಳೊಂದಿಗೆ ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಬಹುದೆಂದು ತಹಶೀಲ್ದಾರ್ ಡಾ.ಅಶ್ವತ್ಥ್ ಎಂ.ಬಿ ತಿಳಿಸಿದ್ದಾರೆ.

## ಮಹಿಳಾ ಸುರಕ್ಷತೆಗೆ ಆದ್ಯತೆ ಇಲ್ಲ

ದಾವಣಗೆರೆ, ಫೆ.21- ಪ್ರಸ್ತುತ ವಿದ್ಯಮಾನಗಳಿಗೆ



ಅನುಗುಣವಾಗಿ ಮಹಿಳಾ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕಿತ್ತು. ಬಜೆಟ್‌ನಲ್ಲಿ ಅದು ಕಾಣುತ್ತಿಲ್ಲ. ಅಲ್ಲದೆ, ಈಗ ಮಂಡನೆಯಾದ ಎಲ್ಲಾ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನವಾಗಲಿ. ದಾವಣಗೆರೆಗೆ ಯಾವುದೇ ರೀತಿಯ ಯೋಜನೆಗಳು ಘೋಷಣೆ ಇಲ್ಲ ಎಂಬುದು ಬೇಸರದ ಸಂಗತಿಯಾಗಿದೆ ಎಂದು ಆರ್.ಜಿ. ಪ್ರಿ ಸ್ಕೂಲ್ ಪ್ರಾಂಶುಪಾಲರಾದ ಆರ್. ಚೈತ್ರ ಪ್ರತಿಕ್ರಿಯಿಸಿದ್ದಾರೆ.

## ರಂಗಾಯಣ ನಾಟಕ ತರಬೇತಿ

ದಾವಣಗೆರೆ, ಫೆ.21- ವೃತ್ತಿ ರಂಗಭೂಮಿ ರಂಗಾಯಣ, ದಾವಣಗೆರೆ ಸಂಸ್ಥೆಯು ವೃತ್ತಿ ರಂಗಭೂಮಿ ಶೈಲಿಯಲ್ಲಿ ಹೊಸ ನಾಟಕ ತಯಾರಿಸುತ್ತಿದೆ, ರಂಗ ನಟನೆ ಮತ್ತು ನೇಪಥ್ಯದಲ್ಲಿ ಆಸಕ್ತಿಯಿರುವ 18 ರಿಂದ 30 ರ ವಯೋಮಿತಿಯ ಯುವಕ, ಯುವತಿಯರು ಇದೇ ದಿನಾಂಕ 25ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು ನಿರ್ದೇಶಕರು, ವೃತ್ತಿ ರಂಗಭೂಮಿ ರಂಗಾಯಣ, ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರ, ಕುವೆಂಪು ನಗರ, ದಾವಣಗೆರೆ ಇವರಿಗೆ ಅರ್ಜಿ ಸಲ್ಲಿಸಬೇಕು. ರಂಗಭೂಮಿಯಲ್ಲಿ ಅನುಭವ, ನಾಟಕ ನಟನೆಯಲ್ಲಿ ಡಿಪ್ಲೋಮಾ ಅಥವಾ ವೃತ್ತಿ ನಾಟಕ ಕಂಪನಿಗಳಲ್ಲಿ ದುಡಿದವರಿಗೆ ಆದ್ಯತೆ ನೀಡಲಾಗುತ್ತದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-200635.

## ಚುನಾವಣೆ ನಡೆಸಲು ಹಣವಿಲ್ಲ ಎಂದ ಲಂಕಾ ಆಯೋಗ

ಕೊಲಂಬೊ, ಫೆ. 20 – ಹಣಕಾಸು ಕಾರಣದಿಂದಾಗಿ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸಾಧ್ಯವಾಗುವುದಿಲ್ಲ ಎಂದು ಶ್ರೀಲಂಕಾದ ಚುನಾವಣಾ ಆಯೋಗ ಅಲ್ಲಿನ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಹಣಕಾಸು ಸಚಿವಾಲಯ ಚುನಾವಣೆಗೆ ಅಗತ್ಯ ಹಣ ಬಿಡುಗಡೆ ಮಾಡಿಲ್ಲ. ಮತಪತ್ರಗಳನ್ನು ಮುದ್ರಿಸಲು ಸರ್ಕಾರಿ ಮುದ್ರಕರು ಮುಂಗಡ ಹಣ ಕೇಳುತ್ತಿದ್ದಾರೆ. ಚುನಾವಣಾ ಕೆಲಸಕ್ಕೆ ಅಗತ್ಯವಾದ ಇಂಧನ ನೀಡಲು ಅಧಿಕಾರಿಗಳು ಹಿಂಜರಿಯುತ್ತಿದ್ದಾರೆ ಎಂದು ಆಯೋಗದ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ತಿಳಿಸಿದ್ದಾರೆ.

ಚುನಾವಣೆ ನಡೆಸುವಂತೆ ಪ್ರತಿಪಕ್ಷಗಳು ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದವು. ಚುನಾವಣೆ ಮುಂದೂಡಿಕೆ ಸಾರ್ವಜನಿಕರ ಹಕ್ಕುಗಳ ಉಲ್ಲಂಘನೆ ಎಂದು ಪ್ರತಿಪಕ್ಷಗಳು ವಾದಿಸಿದ್ದವು. ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ 340 ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಬೇಕಿತ್ತು.

# ಜೆ.ಎಂ. ಖಾಸಗಿ ವಿ.ವಿ. ಮಸೂದೆಗೆ ಅಂಗೀಕಾರ

ಬೆಂಗಳೂರು, ಫೆ. 21 – ದಾವಣಗೆರೆಯಲ್ಲಿ ಜಿ.ಎಂ. ಖಾಸಗಿ ವಿಶ್ವವಿದ್ಯಾಲಯ ಸ್ಥಾಪಿಸುವ ಉದ್ದೇಶದ ಮಸೂದೆಗೆ ವಿಧಾನಸಭೆಯಲ್ಲಿ ಅಂಗೀಕಾರ ನೀಡಲಾಗಿದೆ.

ಜಿ.ಎಂ. ವಿಶ್ವವಿದ್ಯಾಲಯ ಸೇರಿದಂತೆ ಒಟ್ಟು ಆರು ಖಾಸಗಿ ವಿ.ವಿ.ಗಳ ಸ್ಥಾಪನೆಗೆ ಮಸೂದೆಗಳನ್ನು ಮಂಡಿಸಲಾಗಿತ್ತು. ಚರ್ಚೆ ರಹಿತವಾಗಿ ಮಸೂದೆಗಳಿಗೆ ಅಂಗೀಕಾರ ನೀಡಲಾಗಿದೆ.

ಇದರಿಂದಾಗಿ ದಾವಣಗೆರೆಯಲ್ಲಿ ಮೊದಲ ಬಾರಿಗೆ ಖಾಸಗಿ ವಿಶ್ವವಿದ್ಯಾನಿಲಯ ಆರಂಭವಾಗುವಲ್ಲಿ ಪ್ರಮುಖ ಹೆಜ್ಜೆ ಇಟ್ಟಂತಾಗಿದೆ.

ಖಾಸಗಿ ವಿ.ವಿ.ಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ಸ್ವಾಯತ್ತತೆ ಹೊಂದಿರುತ್ತವೆ. ಬೇಡಿಕೆಗೆ ಅಗತ್ಯವಾದ ಕೋರ್ಸ್‌ಗಳನ್ನು ತ್ವರಿತವಾಗಿ ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ.

ಈ ಹಿಂದೆ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಖಾಸಗಿ ವಿ.ವಿ.ಗಳ ಮಸೂದೆ ಮಂಡಿಸಲಾಗಿತ್ತು. ಆದರೆ, ತರಾತುರಿಯಲ್ಲಿ ಮಸೂದೆ ಮಂಡಿಸಲಾಗಿದೆ ಎಂಬ ಆಕ್ಷೇಪಗಳು ವ್ಯಕ್ತವಾಗಿದ್ದವು. ನಂತರದಲ್ಲಿ ಮಸೂದೆಗಳನ್ನು ವಾಪಸ್ ಪಡೆಯಲಾಗಿತ್ತು. ಮಂಗಳವಾರ ಸಂಜೆ ಸದನದಲ್ಲಿ ಮಸೂದೆಗಳನ್ನು ಕೈಗೆತ್ತಿಕೊಳ್ಳಲಾಯಿತು. ಆಗ ಯಾವುದೇ ಸದಸ್ಯರು ಚರ್ಚೆಗೆ ಮುಂದಾಗಲಿಲ್ಲ. ಕೆಲವೇ ನಿಮಿಷಗಳಿಗೆ ಮಸೂದೆಗಳಿಗೆ ಅಂಗೀಕಾರ ನೀಡಲಾಯಿತು. ಜಿ.ಎಂ. ವಿಶ್ವವಿದ್ಯಾಲಯ ಅಲ್ಲದೇ, ಕಿಷ್ಕಿಂದ ವಿಶ್ವವಿದ್ಯಾಲಯ, ಆಚಾರ್ಯ ವಿಶ್ವವಿದ್ಯಾಲಯ, ಸಪ್ತಗಿರಿ ವಿಶ್ವವಿದ್ಯಾಲಯ, ರಾಜ್ಯ ಒಕ್ಕಲಿಗರ ಸಂಘ ವಿಶ್ವವಿದ್ಯಾಲಯ ಮತ್ತು ಟಿ.ಜಾನ್ ವಿಶ್ವವಿದ್ಯಾಲಯಗಳ ಮಸೂದೆಗಳಿಗೆ ಒಪ್ಪಿಗೆ ನೀಡಲಾಗಿದೆ.

# ವಕ್ಫ್ ಬೋರ್ಡ್ ಹಣ ದುರುಪಯೋಗ ; ಕ್ರಮ ಜರುಗಿಸದಿದ್ದರೆ ಲೋಕಾಯುಕ್ತಕ್ಕೆ ದೂರು

ಹರಪನಹಳ್ಳಿ, ಫೆ.21- ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದಾಗಿ ಸರ್ಕಾರದಿಂದ ವಕ್ಫ್ ಬೋರ್ಡ್ ಮೂಲಕ ಲಕ್ಷಾಂತರ ಹಣವನ್ನು ಮಂಜೂರು ಮಾಡಿಸಿಕೊಂಡು ಕಾಮಗಾರಿ ಕೈಗೊಳ್ಳದೆ ಇಲ್ಲಿಯ ಮುಸ್ಲಿಂ ಬರಿಯಲ್ ಗ್ರೌಂಡ್ ಸುನ್ನಿ-ಖಬರ್‌ಸ್ತಾನ ಸಮಿತಿಯ ಮಾಜಿ ಅಧ್ಯಕ್ಷ ಎ.ಮೂಸಾ ಸಾಬ್ ಹಾಗೂ ಕಾರ್ಯದರ್ಶಿ ಬಡಿಗಿ ರಹಮತ್‌ವುಲ್ಲಾ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಕಂದಾಯ ಇಲಾಖೆ ನಿವೃತ್ತ ನೌಕರ ಹಾಗೂ ಸಾಮಾಜಿಕ ಕಾರ್ಯಕರ್ತ ಆರ್.ದಸ್ತಗೀರ್ ಸಾಬ್ ಆರೋಪಿಸಿದ್ದಾರೆ.

**ಹರಪನಹಳ್ಳಿ**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಿನ್ನೆ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂಸಾ ಸಾಬ್ ಅವರು ತಮ್ಮಷ್ಟಕ್ಕೆ ತಾವೇ ಸ್ವಯಂ ಘೋಷಿತ ಸಮಿತಿ ಮಾಡಿಕೊಂಡು ವಕ್ಫ್ ಬೋರ್ಡ್‌ನಿಂದ ಸಮಿತಿಗೆ ಆಗಸ್ಟ್ 2017ರಲ್ಲಿ ಅನುಮತಿ ಪಡೆದಿದ್ದಾರೆ. ಆ ಸಮಿತಿಯಿಂದ ಈದ್ಗಾ ಮತ್ತು ಖಬರ್‌ಸ್ತಾನ ಕಾಂಪೌಂಡ್ ಗೋಡೆ ನಿರ್ಮಾಣ ಸೇರಿದಂತೆ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು 2018ರಲ್ಲಿ ಹಂತ ಹಂತವಾಗಿ ಒಟ್ಟು 11 ಲಕ್ಷ ರೂ.ಗಳನ್ನು ವಕ್ಫ್ ಬೋರ್ಡ್ ಮೂಲಕ ಸರ್ಕಾರದಿಂದ ಪಡೆದಿರುತ್ತಾರೆ. ನಂತರ ಯಾವುದೇ ಕಾಮಗಾರಿ ಮಾಡದೇ ಮಂಜೂರಾದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ಹೇಳಿದರು.

ನಂತರ ಸರ್ಕಾರಕ್ಕೆ ಪಾವತಿಸಬೇಕಾದ ಮೌಲ್ಯವರ್ಧಿತ ತೆರಿಗೆ ಪಾವತಿಸಿರುವುದಿಲ್ಲ, ಸಮಿತಿಯ ಲೆಕ್ಕ ಪತ್ರಗಳನ್ನು ಪ್ರತಿ ವರ್ಷ ಲೆಕ್ಕ ಪರಿಶೋಧನೆ ಮಾಡಿಸಿರುವುದಿಲ್ಲ. ಈ ಸಂಬಂಧ ದೂರು ನೀಡಿದಾಗ ಬಳ್ಳಾರಿಯಿಂದ ಬಂದ ಆಡಿಟ್ ಅಧಿಕಾರಿಗಳು ತನಿಖೆ ನಡೆಸಿ, ಎ.ಮೂಸಾ ಸಾಬ್ ಮತ್ತು ರಹಮತ್‌ವುಲ್ಲಾ ಅವರಿಂದ ವಿವರಣೆ ಪಡೆದು ನಂತರ ಬೋಗಸ್ ಆಗಿರುವ ಬಗ್ಗೆ ವರದಿ ನೀಡಿರುತ್ತಾರೆ ಎಂದರು.

ದಾವಣಗೆರೆ ಜಿಲ್ಲಾ ವಕ್ಫ್ ಅಧಿಕಾರಿಗಳು ಇಲ್ಲಿಯ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ವ್ಯವಸ್ಥಾಪಕರಿಗೆ ಸಂಬಂಧಪಟ್ಟ ಬ್ಯಾಂಕ್ ಖಾತೆಯ ವ್ಯವಹಾರವನ್ನು ಸ್ಥಗಿತಗೊಳಿಸುವಂತೆ ಮೇ 2018ರಂದು ಪತ್ರ ಬರೆದಿದ್ದಾರೆ. ಇವರ ವ್ಯವಹಾರದಲ್ಲಿ ದಾವಣಗೆರೆ ಜಿಲ್ಲಾ ವಕ್ಫ್ ಸಲಹಾ ಸಮಿತಿ ಚೇರ್ಮನ್ ಸಿರಾಜ್ ಮಿಲಾಪಿಯಾಗಿದ್ದಾರೆ ಎಂದು ಆರೋಪಿಸಿದ ಅವರು, ಈ ಸಂಬಂಧ ಜಿಲ್ಲಾ ಮತ್ತು ರಾಜ್ಯ ವಕ್ಫ್ ಬೋರ್ಡ್ ಮಂಡಳಿಗೆ ಸಾಕಷ್ಟು ಬಾರಿ ದಾಖಲೆ ಸಮೇತ ಲಿಖಿತ ದೂರು ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿರು ವುದಿಲ್ಲ. ಈ ಕುರಿತು ಎ.ಮೂಸಾ ಸಾಬ್, ಬಡಿಗಿ ರಹಮತ್‌ವುಲ್ಲಾರವರ ಮೇಲೆ ಕ್ರಮ ಕೈಗೊಳ್ಳದಿದ್ದರೆ ಲೋಕಾಯುಕ್ತಕ್ಕೆ ದೂರು ಸಲ್ಲಿಸುವುದಾಗಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪಟ್ಟಣದ ದರ್ಗಾ ಮಸೀದಿ ಅಧ್ಯಕ್ಷ ಅಶ್ರಫ್ ಅಲಿ, ಉಪಾಧ್ಯಕ್ಷ ಮಾಬುಬಾಷ್, ಕಾರ್ಯದರ್ಶಿ ಜಿ.ರಾಜು ಉಪಸ್ಥಿತರಿದ್ದರು.

**ಕಾಣೆಯಾಗಿದ್ದಾರೆ**



ಬಸವರಾಜ ಪೇಟೆ ಇಜಾರದರಗಲ್ಲಿ ಶಾಮನೂರು ಕಾಂಪೌಂಡ್ ವಾಸಿಯಾದ **ಶರಭಚಾರಿ** ವಯಸ್ಸು : 70 ವರ್ಷ.
ಇವರು ದಿನಾಂಕ 20.02.2023ರ ಸೋಮವಾರ ಸಂಜೆ 4 ಗಂಟೆ ಸಮಯದಲ್ಲಿ ಮನೆಯಿಂದ ಹೊರಗೆ ಹೋದವರು ಬಂದಿರುವುದಿಲ್ಲ. ಇವರು ಮಾನಸಿಕವಾಗಿ ಅಸ್ವಸ್ಥರಾಗಿದ್ದು, ಯಾರಾದರೂ ಇವರನ್ನು ನೋಡಿದಲ್ಲಿ ಹತ್ತಿರದ ಬಸವನಗರ ಪೊಲೀಸ್ ಠಾಣೆಗಾಗಲೀ ಅಥವಾ ಈ ಕೆಳಗಿನ ಫೋನ್ ನಂಬರಿಗಾಗಲೀ ತಿಳಿಸಬೇಕಾಗಿ ವಿನಂತಿ.

ಮೊ : 99640 89305

## ಗೋಡೌನ್ ಬಾಡಿಗೆಗೆ ಇದೆ

ದಾವಣಗೆರೆ ಹೃದಯ ಭಾಗದಲ್ಲಿರುವ ಐಬಿ ರಸ್ತೆ, ಬಾಟಾ ಶೋ ರೂಂ ಹಿಂಭಾಗ, ಸುಸಜ್ಜಿತವಾದ

2000 sqft,
2000 sqft,
500 sqft,

ಗೋಡೌನ್ ಬಾಡಿಗೆಗೆ ಇದೆ.

97411 13055
98440 63379










## ಹುಟ್ಟುಹಬ್ಬದ ಶುಭಾಶಯಗಳು

ಇಂದು ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ
ಅಂದು ವಿದ್ಯಾರ್ಥಿ ಸಮಸ್ಯೆಗಳಿಗೆ ಧ್ವನಿಯಾದ
ಯುವ ನಾಯಕ, ಇಂದು ಜನ ಸೇವೆಗೆಂದೇ ಜೀವನವನ್ನು
ಮುಡುಪಾಗಿಟ್ಟಿರುವ ಜನಸೇವಕ ಹಾಗೂ ತೆರಿಗೆ, ನಿರ್ಧರಣೆ, ಹಣಕಾಸು
ಹಾಗೂ ಅಪೀಲುಗಳ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರೂ,
24ನೇ ವಾರ್ಡ್ ಮಹಾನಗರ ಪಾಲಿಕೆ ಸದಸ್ಯರೂ, ಆತ್ಮೀಯರೂ ಆದ
**ಶ್ರೀ ಕೆ. ಪ್ರಸನ್ನ ಕುಮಾರ್** ಅವರಿಗೆ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

**ಸಚಿನ್ ಎಸ್.ಜಿ.**
ಪ್ರಧಾನ ಕಾರ್ಯದರ್ಶಿ, ಬಿಜೆಪಿ ಯುವ ಮೋರ್ಚಾ
ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ.

**ವಿನಯ್ ದಿಳ್ಯೆಪ್ಪ**
ಬಿಜೆಪಿ ಮುಖಂಡರು
ವಿದ್ಯಾನಗರ, ದಾವಣಗೆರೆ.





SPARSH HOSPITAL
THE TOUCH OF LIFE

## ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕ್

ಲಿವರ್ ಮತ್ತು ಪ್ಯಾಂಕ್ರಿಯಾಸ್ ಕ್ಲಿನಿಕ್
ಸ್ಪರ್ಶ್ ಆಸ್ಪತ್ರೆ – ಬೆಂಗಳೂರು
ಸಮಾಲೋಚನೆಗಾಗಿ ದಾವಣಗೆರೆಗೆ ಭೇಟಿ ನೀಡಲಿದ್ದಾರೆ

### ಉಚಿತ ತಪಾಸಣಾ ಶಿಬಿರ

**ಡಾ. ಗೌತಮ್ ಕುಮಾರ್**
MBBS, MS - General Surgery
Fellowship in HPB & Multi Organ Transplant (ASTS) USA
**Consultant-HPB & Liver Transplant Services**

ಜಾಂಡೀಸ್ | ಫ್ಯಾಟಿ ಲಿವರ್ | ಒಬೆಸಿಟಿ | ಹೆಪಟೈಟಿಸ್ ಬಿ | ಹೆಪಟೈಟಿಸ್ ಸಿ | ಆಲ್ಕೋಹಾಲ್ ರಿಲೇಟೆಡ್ ಲಿವರ್ ಡಿಸೀಸ್ | ಅಸಿಟ್ಸ್ | ಬ್ಲಡ್ ವೊಮಿಟಿಂಗ್ | ಲಿವರ್ ಸ್ವೆಲ್ಲಿಂಗ್ | ಫ್ಯಾಮಿಲಿ ಹಿಸ್ಟರಿ ಆ ಲಿವರ್ ಡಿಸೀಸ್ | ಹೊಟ್ಟೆಯಲ್ಲಿ ನೀರು | ಬೆಲ್ಲಿ (ಆಶ್ಚಿತ್ಸ್) | ಕಾಲುಗಳಲ್ಲಿ ಊತ | ಲಿವರ್ ಸಮಸ್ಯೆಯಿಂದ ಕೋಮಾ | ಲಿವರ್ ಕ್ಯಾನ್ಸರ್ | ಪ್ಯಾಂಕ್ರಿಯಾಸ್ ಕ್ಯಾನ್ಸರ್ | ಪ್ಯಾಂಕ್ರಿಯಾಟೈಟಿಸ್ | ಪ್ಯಾಂಕ್ರಿಯಾಸ್ ಸ್ಟೋನ್

ನೋಂದಣಿಗಾಗಿ ಕರೆಮಾಡಿ: **96869 29090 / 99800 33277**

ದಿನಾಂಕ: ಶುಕ್ರವಾರ, 24ನೇ ಫೆಬ್ರವರಿ 2023 । ಸಮಯ: ಬೆಳಿಗ್ಗೆ 11:00 ರಿಂದ ಸಂಜೆ 5:00 ರವರೆಗೆ

ಸ್ಥಳ: ಹೊರ ರೋಗಿಗಳ ಕ್ಲಿನಿಕ್, ಎಸ್.ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ – 577 002





HAPPY BIRTHDAY

## ಹುಟ್ಟುಹಬ್ಬದ ಶುಭಾಶಯಗಳು

ಕಾಲೇಜಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಧ್ವನಿಯಾಗಿ,
ಇಂದು ಮಹಾನಗರ ಪಾಲಿಕೆ ಸದಸ್ಯನಾಗಿ,
ಸಂಪೂರ್ಣ ಸಮಾಜದ ಧ್ವನಿಯಾಗಿ,
ನಗರದ ಸಮಗ್ರ ಅಭಿವೃದ್ಧಿಗೆ, ಹೊಸ ಆಯಾಮವನ್ನೇ
ನೀಡಬಲ್ಲ ಯುವ ನಾಯಕ ಮತ್ತು ನಮ್ಮ ಆತ್ಮೀಯ ಸ್ನೇಹಿತನಾದ
**ಶ್ರೀ ಕೆ. ಪ್ರಸನ್ನಕುಮಾರ್**
ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

**ಯುಬಿಡಿಟಿ ಹಳೆಯ ವಿದ್ಯಾರ್ಥಿಗಳ ಸಂಘ**



ATHER

## ಆತ್ಮೀಯ ಆಮಂತ್ರಣ




## ATHER Electric Scooter

## ಉದ್ಘಾಟನಾ ಸಮಾರಂಭ

ಬುಧವಾರ 22 ಫೆಬ್ರವರಿ 2023 । ಬೆಳಿಗ್ಗೆ 9.00 ಕ್ಕೆ

ಸ್ಥಳ :
ಶೃತಿ ಎಲೆಕ್ಟ್ರಿಕ್ ವೆಹಿಕಲ್ಸ್ ಪ್ರೈವೇಟ್ ಲಿಮಿಟೆಡ್
ದೇವರಾಜ ಅರಸು ಬಡಾವಣೆ, 'ಎ' ಬ್ಲಾಕ್, ಪಿ.ಬಿ. ರಸ್ತೆ, ದಾವಣಗೆರೆ

ತಮ್ಮ ಆಗಮನಾಭಿಲಾಷಿಗಳು :
**ಶೃತಿ ಮೋಟಾರ್ಸ್ ಮಾಲೀಕರು ಮತ್ತು ಸಿಬ್ಬಂದಿವರ್ಗ**
ಸಂಪರ್ಕಿಸಿ : 93640 08229





## ಹುಟ್ಟುಹಬ್ಬದ ಶುಭಾಶಯಗಳು

HAPPY BIRTHDAY



ದಿನಾಂಕ 22.02.2023 ರಂದು
ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ದಾವಣಗೆರೆ ಲಯನ್ಸ್ ಕ್ಲಬ್
ಹಿರಿಯ ನಿರ್ದೇಶಕರೂ,
ಸಾಮಾಜಿಕ ಸೇವಾ ಕಾರ್ಯಕರ್ತರೂ,
ವರ್ತಕರೂ,
ನಮ್ಮ ಆತ್ಮೀಯರೂ ಆದ

**ಶ್ರೀ ಕೋರಿ ಶಿವಕುಮಾರ್**

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು. ಭಗವಂತನು ಅವರಿಗೆ ಆಯುರಾರೋಗ್ಯ-ಐಶ್ವರ್ಯವನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ....



25ನೇ ವಾರ್ಡ್ ಸ್ನೇಹಿತರು ಹಾಗೂ
**ಸರ್ವ ಸದಸ್ಯರು, ಲಯನ್ಸ್ ಕ್ಲಬ್, ದಾವಣಗೆರೆ.**


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte